ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

## Monthly Magazine

ಸಂಪುಟ 11 ಸಂಚಿಕೆ 6 ಜೂನ್ 2026



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆರ್ಎಸ್ಎಸ್ ಸರಸಂಘಚಾಲಕರಾದ ಡಾ. ಮೋಹನ್ ಭಾಗವತ್‌ರವರು ಜೆಎಸ್ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ' ಎಂಬ ವಿಷಯ ಕುರಿತು ಮಾತನಾಡಿದರು. (7 ಮೇ 2026)



ಜೆಎಸ್‌ಎಸ್ ಗ್ರಂಥಮಾಲೆಯು ಪ್ರಕಟಿಸಿದ ಕೃತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಬಿಡುಗಡೆಗೊಳಿಸಲಾಯಿತು. ಡಾ. ಸುಜಾತ ಸ್ವಾಮಿ, ಡಾ. ಎ.ಎಸ್. ಕಿರಣ್‌ಕುಮಾರ್, ಡಾ. ಮಾನಸ, ಡಾ. ಸಿ. ನಾಗಣ್ಣ ಹಾಗೂ ಶ್ರೀ ಜಿ. ಜಗದೀಶ್‌ರವರುಗಳಿದ್ದಾರೆ. (2 ಮೇ 2026)



ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠಗಳ ಸಂಯುಕ್ತಾಶ್ರಯದಲ್ಲಿ ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ 'ಶರಣರಿನ್ ನೂಟ್ರಿಯೊರು ವಸನಂಗಳ್' ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಎಸ್. ಪ್ರಕಾಶಂರವರು ಬಿಡುಗಡೆಗೊಳಿಸಿದರು. ಡಾ. ಪಿ. ಮಣಿ, ಡಾ. ಜಯಲಲಿತಾ, ಶ್ರೀ ರವೀಂದ್ರ ಭಟ್, ಶ್ರೀ ವೆಂಕಟರೆಡ್ಡಿ ಡಿ. ಪಾಟೀಲ್ ಹಾಗೂ ಹರವೆ ಶ್ರೀಗಳನ್ನು ಕಾಣಬಹುದು. (11 ಮೇ 2026)

## ದೇಶದ ಸ್ವಾತಂತ್ರ್ಯ ಕಾಪಾಡಲು ಭ್ರಾತೃತ್ವ ಭಾವನೆ ಮುಖ್ಯ




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆರ್‌ಎಸ್‌ಎಸ್ ಸರಸಂಘಚಾಲಕರಾದ ಡಾ. ಮೋಹನ್ ಭಾಗವತ್‌ರವರು ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ ನೀಡಿದ ಸಂದರ್ಭದಲ್ಲಿ ಶ್ರೀ ಮಧುಸೂದನ ಸಾಯಿಯವರ 14ನೇ ಉಪನ್ಯಾಸದ 'ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ' ಕೃತಿಯನ್ನು ಬಿಡುಗಡೆಗೊಳಿಸಿದರು. (7 ಮೇ 2026)

ದೇಶದ ಸ್ವಾತಂತ್ರ್ಯ ಕಾಪಾಡಲು ಭ್ರಾತೃತ್ವ ಭಾವನೆ ಮುಖ್ಯ ಎಂದು ಆರ್‌ಎಸ್‌ಎಸ್ ಸರಸಂಘಚಾಲಕರಾದ ಡಾ. ಮೋಹನ್ ಭಾಗವತ್‌ರವರು ಹೇಳಿದರು.

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ದಿನಾಂಕ 7.5.2026 ರಂದು ಆಯೋಜಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ–15 'ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ' ವಿಷಯ ಕುರಿತು ಅವರು ಮಾತನಾಡಿದರು. ಡಾ. ಅಂಬೇಡ್ಕರ್‌ರವರ ಸಂವಿಧಾನ ಸಭೆಯ ಭಾಷಣಗಳನ್ನು ಮತ್ತೊಮ್ಮೆ ಓದಬೇಕು. ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿಯೇ ದೇಶದ ಸರ್ವಾಂಗೀಣ ಅಭಿವೃದ್ಧಿ, ರಾಜಕೀಯ ಮತ್ತು ಆರ್ಥಿಕ ಸಮಾನತೆಗಿಂತ ಸಾಮಾಜಿಕ ಸಮಾನತೆ ಮುಖ್ಯ ಎಂದು ಅವರು ಪ್ರತಿಪಾದಿಸಿದ್ದಾರೆ. ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಬೆಸೆಯುವ ಕೊಂಡಿಯೇ ಬಂಧುಭಾವ. ಈ ಬಂಧುಭಾವ ಇಲ್ಲದಿದ್ದರೆ ದೇಶದ ಸ್ವಾತಂತ್ರ್ಯ ಕಾಪಾಡಿಕೊಳ್ಳುವುದು ಕಷ್ಟ. ಸಹೋದರರನ್ನು ಅಸ್ಪೃಶ್ಯರಾಗಿ ಶತಮಾನಗಳ ಕಾಲ ದೂರವಿಡಲಾಗಿದೆ. ಮೇಲು–ಕೀಳು ಎಂಬ ಮನೋಭಾವ ಕಳೆದು ಸರ್ವರೂ ಒಂದೇ ಎಂಬ ಏಕಭಾವ ಭಾರತೀಯರಲ್ಲಿ ಮೂಡಬೇಕು. ದೇಶದ ಕೆಲವೇ ಕೆಲವು ಶ್ರೀಮಂತ ವ್ಯಕ್ತಿಗಳ ಏಳಿಗೆಯಿಂದ ದೇಶ ಅಭಿವೃದ್ಧಿಯಾಗಿದೆ ಎಂದು ಹೇಳಲಾಗುತ್ತಿದೆ. ದೇಹದ ಒಂದು ಭಾಗ ಪಾರ್ಶ್ವವಾಯುವಿಗೆ ಒಳಗಾಗಿದ್ದರೆ, ಇಡೀ ದೇಹ ಆರೋಗ್ಯವಾಗಿದೆ ಎಂದು ಹೇಳಲು ಹೇಗೆ ಆಗುವುದಿಲ್ಲವೋ ಹಾಗೆಯೇ ಸಮಾಜದ ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿ ಆಗದಿದ್ದರೆ ಅದು ನಿಜವಾದ

ಅಭಿವೃದ್ಧಿಯಲ್ಲ. ಹೀಗಾಗಿ ಕಟ್ಟಕಡೆಯ ವ್ಯಕ್ತಿಯೂ ಸಾಮರಸ್ಯ, ಸೌಹಾರ್ದತೆಯಿಂದ ನಾವೆಲ್ಲರೂ ಒಂದು ಎಂದು ಸಂತೋಷದಿಂದ ಇದ್ದಾಗ ಮಾತ್ರ ದೇಶದ ನಿಜವಾದ ಅಭಿವೃದ್ಧಿ ಆಗುತ್ತದೆ. ಸಮಾಜದಲ್ಲಿ ಸಾಮರಸ್ಯ ಮೂಡಿಸಲು ವಿವಿಧ ಜಾತಿ, ಧರ್ಮ ಮತ್ತು ಭಾಷೆಯ ಜನರ ಮನೆಗಳಿಗೆ ಭೇಟಿ ನೀಡಿ ಸ್ನೇಹ ಬೆಳೆಸಬೇಕು. ದುರ್ಬಲ ವರ್ಗದವರ ಉದ್ಧಾರಕ್ಕೆ ಎಲ್ಲರೂ ಒಗ್ಗೂಡಿ ಶ್ರಮಿಸಬೇಕು. ಕಟುವಾದ ನುಡಿಗಳನ್ನು ಬಿಟ್ಟು, ಸತ್ಯ ಮತ್ತು ಪ್ರೀತಿಯಿಂದ ಸಂವಹನ ನಡೆಸುವ ಮೂಲಕ ಮನಸ್ಸಿನ ವಿಕಾರಗಳನ್ನು ದೂರ ಮಾಡಬೇಕು ಎಂದು ಅವರು ಹೇಳಿದರು.

ಭಾರತೀಯರು ಭ್ರಾತೃತ್ವ ಮತ್ತು ಪರಸ್ಪರ ಸಹಾಯದೊಂದಿಗೆ ನಾಗರಿಕತೆ ಕಟ್ಟಿದ್ದಾರೆ. ನಮ್ಮ ಸಮಾಜವು ಪರೋಪಕಾರವೇ ಸೇವೆ, ಕರ್ತವ್ಯವೇ ಜೀವನದ ಪರಮ ಗುರಿಯೆಂದು ತಿಳಿದಿದೆ. ಭಾಷೆ, ಜಾತಿ, ಪಂಗಡಗಳನ್ನು ಮೀರಿ ಬಂಧುತ್ವ ನೆಲೆಗೊಳ್ಳಬೇಕು. ಅಸ್ತಿತ್ವಕ್ಕಾಗಿ ಮತ್ತೊಬ್ಬರ ವಿರುದ್ಧ ಹೋರಾಟ ನಡೆಸುವುದು ಪಾಶ್ಚಾತ್ಯ ಕಲ್ಪನೆ. ಕೆಟ್ಟ ಸಂಪಾದನೆ ಬೇಡವೆಂಬ ಅಚಲ ನಿರ್ಧಾರ ಕೈಗೊಳ್ಳಬೇಕು. ನಮ್ಮ ಬೆಳವಣಿಗೆಯಲ್ಲಿ ಸ್ವಾರ್ಥ ಬಿಟ್ಟು ಸದ್ಭಾವನೆ ಇರಬೇಕು. ನಮ್ಮ ದೇಶದಲ್ಲಿ ಆದಾಯ ಕಡಿಮೆ, ಜನರ ಬೇಡಿಕೆ ಹಾಗೂ ಅವಶ್ಯಕತೆ ಹೆಚ್ಚು ಎಂಬುವುದು ಸತ್ಯ. ಆದರೆ ಶ್ರೀಮಂತಿಕೆ ಹಾಗೂ ಅಭಿವೃದ್ಧಿ ಏಕವ್ಯಕ್ತಿಗೆ ಸೀಮಿತವಾಗದೆ ಸಾಮೂಹಿಕವಾಗಬೇಕು. ಆಗ ಸಮಾಜದಲ್ಲಿ ಆರೋಗ್ಯಕರ ವಾತಾವರಣ ಕಾಣಲು ಸಾಧ್ಯವಾಗುತ್ತದೆ ಎಂದರು.

ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಾ, ಹಿಂದೂ ಧರ್ಮ ಮತ್ತು ಸಂಸ್ಕೃತಿ ಇಡೀ ಜಗತ್ತಿಗೇ ಮಾರ್ಗದರ್ಶನ ನೀಡುವ ಸ್ಥಾನದಲ್ಲಿದೆ. ಪರೋಪಕಾರ ಮಾಡುವ ಮಾನವೀಯ ಅನುಕಂಪ ಭಾರತೀಯರಲ್ಲಿ ಮಾತ್ರ ಇದೆ. ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಗಟ್ಟಿತನ ವಿಶ್ವಕ್ಕೆ ಮಾದರಿಯಾಗಿದೆ. ಕೆಲವರು ದೇಶ ಕೆಟ್ಟಿದೆ, ಜಗತ್ತು ಕೆಟ್ಟಿದೆ ಎಂಬ ಅಂಕುಡೊಂಕಿನ ಮಾತುಗಳನ್ನಾಡುತ್ತಾರೆ. ಆದರೆ, ತಾನು ಸರಿ ಇದ್ದೇನೆಯೇ ಎಂಬುದನ್ನು ಮೊದಲು ಮನನ ಮಾಡಿಕೊಳ್ಳಬೇಕು. ತಾನು ಸರಿ ಹೋದರೆ ದೇಶ ಸರಿ ಹೋಗುತ್ತದೆ, ವಿಶ್ವ ಸರಿಹೋಗುತ್ತದೆ ಎಂಬ ಸತ್ಯವನ್ನು ಅರಿಯಬೇಕು. ಕನ್ನಡಿಯ ಧೂಳನ್ನು ಸ್ವಚ್ಛಗೊಳಿಸುವುದಕ್ಕಿಂತ ತನ್ನ ಮುಖ ಮತ್ತು ಮನಸ್ಸಿನಲ್ಲಿರುವ ಧೂಳನ್ನು ತೆಗೆಯಬೇಕು. ದ್ವೇಷಮುಕ್ತವಾದ ಮನಸ್ಸು ಹೊಂದಿದ್ದರೆ ಶಾಂತಿ, ಸಂತೋಷ ತನಗೆ ತಾನೆ ಬರುತ್ತದೆ. ಮೊದಲು ಅಂತರಂಗದ ಶುದ್ಧಿ ಹೊಂದಬೇಕು. ಮನಸ್ಸು ಪರಿಶುದ್ಧವಾದರೆ ಮನುಷ್ಯ ಕೂಡ ಪರಿಶುದ್ಧನಾಗುತ್ತಾನೆ. ಐಷಾರಾಮಿ ಬದುಕು ಇದ್ದರೆ ಮಾತ್ರ ಸಂತೋಷ ಸಿದ್ಧಿಸುವುದಿಲ್ಲ, ಕಷ್ಟದಲ್ಲಿ ಇರುವವರಿಗೆ ಉಪಕಾರ ಮಾಡುವುದು ಆತ್ಮ ಸಂತೋಷವನ್ನು ಉಂಟು ಮಾಡುತ್ತದೆ. ಪರೋಪಕಾರ ಪುಣ್ಯವಾಗಿದ್ದು, ಮತ್ತೊಬ್ಬರಿಗೆ ತೊಂದರೆ ಕೊಡುವುದು ಪಾಪದ ಕೆಲಸ ಎಂಬ ಸತ್ಯವನ್ನು ಅರಿಯಬೇಕು. ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ ಅಂಗವಾಗಿ 2007ರಿಂದ ವಿಶೇಷ ಉಪನ್ಯಾಸಗಳನ್ನು ಆಯೋಜನೆ ಮಾಡಲಾಗುತ್ತಿದೆ. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ತ್ರಿವಿಧ ದಾಸೋಹದ ಪರಿಕಲ್ಪನೆಯಲ್ಲಿ ಶ್ರೀಮಠ ಸಾಗುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಮಧುಸೂದನ ಸಾಯಿಯವರ 14ನೇ ಉಪನ್ಯಾಸದ 'ಆತ್ಮನೋ ಮೋಕ್ಷಾರ್ಥಂ ಜಗತ್ ಹಿತಾಯ ಚ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಡಾ. ಬಿ. ಸುರೇಶ್ ಸ್ವಾಗತಿಸಿದರು. ಶ್ರೀಮತಿ ಕೆ.ಜಿ. ವಿನುತ ಮತ್ತು ಕು. ಎಂ. ಅಮೂಲ್ಯ ಪ್ರಾರ್ಥಿಸಿದರು. ಪ್ರೊ. ಕೆ.ಎಸ್. ಸುರೇಶ್ ಕಾರ್ಯಕ್ರಮ ನಿರೂಪಿಸಿದರು.

# ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು




ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಏರ್ಪಡಿಸಿದ್ದ ಕೃತಿಗಳ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಜಗದ್ಗುರುಗಳವರು ಆಶೀರ್ವಚನ ನೀಡಿದರು. (2 ಮೇ 2026)

ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ದಿನಾಂಕ 2.5.2026 ರಂದು ಏರ್ಪಡಿಸಿದ್ದ ಕೃತಿಗಳ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಪೂಜ್ಯರು ಆಶೀರ್ವಚನ ನೀಡಿದರು. ಪುಸ್ತಕ ಓದುವ ಹವ್ಯಾಸ ಅನೇಕರಿಗಿರುತ್ತದೆ. ಆದರೆ ಓದಿದ್ದನ್ನು ಎಷ್ಟರಮಟ್ಟಿಗೆ ಆರ್ಜನೆ ಮಾಡಿಕೊಳ್ಳುತ್ತಾರೆ ಎಂಬುದು ಮುಖ್ಯವಾಗುತ್ತದೆ. ಅತ್ಯಂತ ಮೌಲಿಕವಾದ ಕೃತಿಗಳು ಇಂದು ಬಿಡುಗಡೆಗೊಂಡಿವೆ. ಕಲ್ಪನೆಗಳನ್ನು ವಿಸ್ತರಿಸಿಕೊಳ್ಳುವಲ್ಲಿ ಪುಸ್ತಕಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಮನಸ್ಸಿನ ವಿಕಾಸಕ್ಕೂ ಸಹಕಾರಿಯಾಗುತ್ತವೆ ಎಂದು ಹೇಳಿದರು.

ಭಾರತೀಯ ಬಾಹ್ಯಾಕಾಶ ಸಂಸ್ಥೆಯ ನಿವೃತ್ತ ಅಧ್ಯಕ್ಷರಾದ ಡಾ. ಎ.ಎಸ್. ಕಿರಣ್‌ಕುಮಾರ್‌ರವರು, ಬಾಹ್ಯಾಕಾಶ ತಂತ್ರಜ್ಞಾನದಿಂದ ಸಮಾಜಕ್ಕೆ ತುಂಬಾ ಉಪಯೋಗವಾಗುತ್ತಿದೆ. ಪುಸ್ತಕಗಳನ್ನು ಓದುವುದರಿಂದ ಕಲ್ಪನಾಶಕ್ತಿ ವೃದ್ಧಿಯಾಗುತ್ತದೆ. ನಮ್ಮಲ್ಲಿರುವ ಅಸಲಿ ಬುದ್ಧಿವಂತಿಕೆಯು ಹೆಚ್ಚುತ್ತದೆ. ನಮ್ಮ ಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು ಪುಸ್ತಕಗಳನ್ನು ಓದಬೇಕು ಎಂದು ತಿಳಿಸಿದರು.

ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯುಕ್ತರೂ ಆದ ಶ್ರೀ ಜಿ. ಜಗದೀಶ್‌ರವರು, ಇಂದು ಪುಸ್ತಕ ಓದುವ ಸಂಸ್ಕೃತಿ ಕಡಿಮೆಯಾಗಿದೆ. ಗ್ರಂಥಾಲಯಗಳಲ್ಲಿ ಒಂದೂ ಪುಟವನ್ನೂ ತೆರೆಯದ

ಎಷ್ಟೋ ಪುಸ್ತಕಗಳಿವೆ. ಗ್ರಂಥಾಲಯಗಳಿಗೆ ಬರೀ ಪುಸ್ತಕಗಳನ್ನು ತುಂಬಿಸುತ್ತಿದ್ದೇವೆ. ಆದರೆ ಓದುಗರಿಗೆ ಏನು ಬೇಕೋ ಅದನ್ನು ನಾವು ಕೊಡಬೇಕು. ಜನರು ಬಳಸುವಂತಹ ಗ್ರಂಥಾಲಯಗಳನ್ನು ನಾವು ತೆರೆಯಬೇಕಿದೆ. ಪುಸ್ತಕಗಳನ್ನು ಓದುವುದರಿಂದ ಅದ್ಭುತ ಅನುಭವಗಳು ಸಿಗುತ್ತವೆ. ಆದ್ದರಿಂದ ಜನಸಾಮಾನ್ಯರಿಗೆ ಜ್ಞಾನವು ಲಭ್ಯವಾಗುವಂತೆ ಮಾಡಬೇಕು, ಈ ನಿಟ್ಟಿನಲ್ಲಿ ಜೆಎಸ್‌ಎಸ್ ಗ್ರಂಥಮಾಲೆಯು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಜನರು ಮೊಬೈಲ್ ಬಳಸುವುದರಿಂದ ಬೇಸತ್ತಿದ್ದು ರೈಲು, ಬಸ್ಸು, ವಿಮಾನ ನಿಲ್ದಾಣಗಳಲ್ಲಿ ಓದುವ ಜನ ಕಾಣುತ್ತಾರೆ. ಪ್ರಯಾಣದ ಸಂದರ್ಭದಲ್ಲಿ ಓದುವ ಹವ್ಯಾಸವನ್ನು ರೂಢಿಸಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು.

ಫ್ರೆಂಚ್ ಭಾಷಾ ಉಪನ್ಯಾಸಕರಾದ ಡಾ. ಸುಜಾತ ಸ್ವಾಮಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ ಹಾಗೂ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಸಿ. ನಾಗಣ್ಣರವರುಗಳು ಕೃತಿಗಳನ್ನು ಪರಿಚಯಿಸಿದರು.

ಶ್ರೀಮತಿ ರೂಪಾ ಗುರುಪ್ರಸಾದ್ ಮತ್ತು ಶ್ರೀಮತಿ ವಿನುತರವರುಗಳು ಪ್ರಾರ್ಥನೆ ಸಲ್ಲಿಸಿದರು. ಡಾ. ಎಂ.ಎನ್. ನಂದೀಶ್ ಹಂಚೆ ಸ್ವಾಗತಿಸಿದರು. ಶ್ರೀ ನಗರ್ಲೆ ಶಿವಕುಮಾರ್ ವಂದಿಸಿದರು. ಡಾ. ಪ್ರಭುಸ್ವಾಮಿ ಕಟ್ನವಾಡಿ ಕಾರ್ಯಕ್ರಮವನ್ನು ನಿರೂಪಿಸಿದರು.




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ 291ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರರವರು ಗಾಯನ ಪ್ರಸ್ತುತಿ ಪಡಿಸಿದರು. ಪಕ್ಕವಾದ್ಯ ಸಹಕಾರದಲ್ಲಿ ವಿದ್ವಾನ್ ತುಮಕೂರು ಬಿ. ರವಿಶಂಕರ್, ವಿದ್ವಾನ್ ಶರತ್ ಕೌಶಿಕ್, ಶ್ರೀ ಹರಿಕಾವ್ಯ ಹಾಗೂ ವಿದ್ವಾನ್ ಮತ್ತೂರು ಶ್ರೀನಿಧಿಯವರುಗಳಿದ್ದಾರೆ. (1 ಮೇ 2026)

## ಶಿಬಿರಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಸುತ್ತೂರು ಶ್ರೀಕ್ಷೇತ್ರ, ಊಟಿ ಮತ್ತು ಬಿಳಿಗಿರಿರಂಗನ ಬೆಟ್ಟದಲ್ಲಿ ವಿವಿಧ ಶಿಬಿರಗಳು ನೆರವೇರಿದವು. ಶಿಬಿರಾರ್ಥಿಗಳು ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸ, ಸಾಯಂಕಾಲ ದೇಸಿ ಆಟಗಳಲ್ಲಿ ಪಾಲ್ಗೊಂಡರು. ಸಂಜೆಯ ಪ್ರಾರ್ಥನೆಯ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

### ತಾಂತ್ರಿಕ ವಿದ್ಯಾರ್ಥಿಗಳ ಶಿಬಿರ

## ಮೊಬೈಲ್ ಮತ್ತು ಸಾಮಾಜಿಕ ಮಾಧ್ಯಮಗಳ ದಾಸರಾಗಬೇಡಿ






ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ತಾಂತ್ರಿಕ ವಿದ್ಯಾರ್ಥಿಗಳ ಶಿಬಿರದಲ್ಲಿ 'ವಿಜಯವಾಣಿ' ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಕೆ.ಎನ್. ಚನ್ನೇಗೌಡರವರು ಸಮಾರೋಪ ಭಾಷಣ ಮಾಡಿದರು. ಡಾ. ಎಸ್. ಮುರಳಿ, ಡಾ. ಎ.ಎನ್. ಸಂತೋಷ್ ಕುಮಾರ್, ಶ್ರೀಮತಿ ಎಂ.ವಿ. ರೂಪ, ಶ್ರೀಮತಿ ಅನುಪಮ ಜೆ. ಮುರಳಿಯವರುಗಳಿದ್ದಾರೆ. ಪಕ್ಕದ ಚಿತ್ರದಲ್ಲಿ ಶಿಬಿರಾರ್ಥಿಗಳು ಹಾಗೂ ಸಂಚಾಲಕರುಗಳು. (30 ಏಪ್ರಿಲ್ 2026)

ಮೊಬೈಲ್ ಮತ್ತು ಸಾಮಾಜಿಕ ಮಾಧ್ಯಮಗಳ ದಾಸರಾಗಬೇಡಿ ಎಂದು ವಿಜಯವಾಣಿ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಕೆ.ಎನ್. ಚನ್ನೇಗೌಡರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 30.4.2026 ರಂದು ನಡೆದ ತಾಂತ್ರಿಕ ವಿದ್ಯಾರ್ಥಿಗಳ ಶಿಬಿರದಲ್ಲಿ ಅವರು ಸಮಾರೋಪ ಭಾಷಣ ಮಾಡಿದರು. ಯುವಕರಲ್ಲಿ ಸ್ವನಿಯಂತ್ರಣ ಶಕ್ತಿ ಕಡಿಮೆಯಾಗುತ್ತಿದೆ. ಒತ್ತಡ ನಿರ್ವಹಿಸುವಲ್ಲಿ ಸೋಲುತ್ತಿದ್ದಾರೆ. ಪ್ರತಿಯೊಂದು ವಿಷಯಕ್ಕೂ ತೀಕ್ಷ್ಣ ಪ್ರತಿಕ್ರಿಯೆ ನೀಡುವುದು ಅಭ್ಯಾಸವಾಗಿದೆ. ಮಾದಕದ್ರವ್ಯ ಸೇವನೆ, ಧೂಮಪಾನ, ಆನ್‌ಲೈನ್ ಬೆಟ್ಟಿಂಗ್ ಇವೇ ಮೊದಲಾದ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ರಾಷ್ಟ್ರಕ್ಕೆ ಉತ್ತಮ ಕೊಡುಗೆ ನೀಡಬಲ್ಲ ವಿದ್ಯಾರ್ಥಿಗಳು ಉತ್ತಮ ನಾಯಕತ್ವದ ಗುಣಗಳನ್ನು

ಬೆಳೆಸಿಕೊಳ್ಳಬೇಕು. ಸಮಾಜಮುಖಿ ಚಟುವಟಿಕೆಗಳಲ್ಲಿ ಉತ್ಸಾಹದಿಂದ ತೊಡಗಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಶ್ರೀ ಸುತ್ತೂರು ಮಠವು ನಡೆಸುತ್ತಿರುವ ಇಂತಹ ವ್ಯಕ್ತಿತ್ವ ವಿಕಸನ ಶಿಬಿರಗಳು ಬಹಳ ಸಹಕಾರಿಯಾಗಲಿವೆ ಎಂದು ತಿಳಿಸಿದರು.

ಮೈಸೂರಿನ ಮಹಾರಾಜ ವಿದ್ಯಾಸಂಸ್ಥೆ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಸ್. ಮುರಳಿಯವರು, ವ್ಯಕ್ತಿಗೆ ಹಣಕ್ಕಿಂತ ಗುಣ ಮುಖ್ಯ. ವ್ಯಕ್ತಿತ್ವ ನಿರ್ಮಾಣದ ಗುಣಗಳು ಆಳವಾಗಿರಬೇಕು. ಆಸೆ, ಆಮಿಷಗಳಿಗೆ ಒಳಗಾಗಬಾರದು. ಹೊಸ ಆಲೋಚನೆಗಳನ್ನು ಮಾಡುತ್ತ, ಅನ್ವೇಷಣಾತ್ಮಕ ಮಾರ್ಗದಲ್ಲಿ ಮುನ್ನಡೆಯಬೇಕು. ಇಂತಹ ಶಿಬಿರಗಳಿಂದ ಸಾಮರ್ಥ್ಯವು ವೃದ್ಧಿಯಾಗುತ್ತದೆ ಎಂದು ತಿಳಿಸಿದರು.

ಇಸ್ರೋದ ವಿಜ್ಞಾನಿಗಳಾದ ಶ್ರೀಮತಿ ಎಂ.ವಿ. ರೂಪರವರು, ಮಹಿಳೆಯರು ಬಾಹ್ಯಾಕಾಶ ಸಂಶೋಧನಾ ಕ್ಷೇತ್ರಗಳಲ್ಲಿ ವಿಜ್ಞಾನಿಗಳಾಗಿ ಕಾರ್ಯನಿರ್ವಹಿಸಲು ಪ್ರಯತ್ನಿಸಬೇಕು. ಉತ್ತಮ ನಾಯಕರಾದವರು ಯಶಸ್ಸನ್ನು ಅವರ ತಂಡದ ಸದಸ್ಯರಿಗೆ ಅರ್ಪಿಸಿ, ಸೋಲಿನ ಹೊಣೆಯನ್ನು ತಾವೇ ಹೊರುತ್ತಾರೆ. ದೀರ್ಘಕಾಲದ ಏಕಾಗ್ರತೆಯು ವೈಜ್ಞಾನಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಬಹಳ ಮುಖ್ಯವಾಗಿದೆ. ಧ್ಯಾನದಿಂದ ಇದನ್ನು ಸಂಪಾದಿಸಬಹುದು ಎಂದರು.

ಜೆಎಸ್ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎ.ಎನ್. ಸಂತೋಷ್‌ಕುಮಾರ್‌ರವರು ಒಳ್ಳೆಯ ವರ್ತನೆ, ಬದುಕುವ ಕಲೆ, ಮನೋಸ್ಥೈರ್ಯ ಹಾಗೂ ಸಮಾಜವು ಸ್ವೀಕರಿಸುವಂತಹ ಗುಣಗಳನ್ನು ಬೆಳೆಸಿಕೊಳ್ಳಬೇಕು. ಎಷ್ಟೇ ವಿದ್ಯಾವಂತರಾದರೂ ಸಮಯ, ಸಂದರ್ಭ, ಸ್ಥಳ ಹಾಗೂ ವ್ಯಕ್ತಿಗಳೊಂದಿಗೆ ಹೇಗೆ ವರ್ತಿಸಬೇಕು ಎಂಬುದನ್ನು ಕಲಿಯಬೇಕು. ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಇನ್ಫೋಸಿಸ್‌ನ ಗ್ಲೋಬಲ್ ಎಜುಕೇಷನ್ ಸೆಂಟರ್‌ನ ವ್ಯವಸ್ಥಾಪಕರಾದ ಶ್ರೀ ಕೆ.ಎಸ್. ಸುಂದರ್‌ರವರು, ಭಾರತೀಯ ಮೌಲ್ಯಗಳಿಗೆ ಕಾಲ ಮಿತಿ ಇಲ್ಲ. ಹುಟ್ಟಿನಿಂದ ಸಾಯುವ ತನಕ ಅವುಗಳನ್ನು ಅಳವಡಿಸಿಕೊಂಡು ಬದುಕಬೇಕು. 'ಅಹಿಂಸಾ ಪರಮೋ ಧರ್ಮಃ' ಎಂಬ ನುಡಿಯಂತೆ ಬದುಕಿನಲ್ಲಿ ಯಾರಿಗೂ ತೊಂದರೆ ಕೊಡದೆ ಸಕಲ ಜೀವಿಗಳಲ್ಲಿ ಕರುಣೆ, ದಯೆ ತೋರಿಸಬೇಕು. ತಂತ್ರಜ್ಞಾನದ ಜೊತೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಹೋಗಬೇಕು ಎಂದರು.

ಶಿಕ್ಷಣ ತಜ್ಞರಾದ ಶ್ರೀಮತಿ ಸೀಮಾ ದುಬೆಯವರು, ಆರೋಗ್ಯಕರ ಜೀವನಶೈಲಿಯಲ್ಲಿ ಮಾನಸಿಕ, ದೈಹಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬೇಕು. ಮನಸ್ಸು ಹಾಗೂ ದೇಹಗಳ ನಡುವೆ ಸಮನ್ವಯವಿರಬೇಕು. ಯುವಕರಲ್ಲಿ ಕಾರ್ಯದ ಒತ್ತಡ, ಉದ್ಯೋಗದ ಅನಿಶ್ಚಿತತೆ, ಸಂಶಯ ಪ್ರವೃತ್ತಿಗಳಿದ್ದು ಇವುಗಳಿಂದ ಹೊರಬರಬೇಕು. ಯಶಸ್ಸಿನಲ್ಲಿ ಪ್ರೇರಣೆಗಿಂತ ಶಿಸ್ತು ಪ್ರಮುಖ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ಮೈಸೂರಿನ ಮಹಾರಾಜ ವಿದ್ಯಾಸಂಸ್ಥೆಯ ಟ್ರಸ್ಟಿಯಾದ ಶ್ರೀಮತಿ ಅನುಪಮ ಜೆ. ಮುರುಳಿಯವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀ ಜೆ. ರಾಹುಲ್, ಕು. ತೇಜಸ್ವಿನಿ, ಶ್ರೀ ಕೆ.ಎನ್. ಮಾದೇಶ್, ಕು. ವೈಷ್ಣವಿ ನಾಯಕ್ ಅನಿಸಿಕೆಯನ್ನು ಹಂಚಿಕೊಂಡರು.

ಡಾ. ಸಿ. ರೇವಣ್ಣ ಶಿಬಿರದ ವರದಿ ಮಂಡಿಸಿದರು. ಶ್ರೀ ಪೃಥ್ವಿ ಪ್ರಾರ್ಥಿಸಿದರು. ಡಾ. ಎಸ್.ಎನ್. ದೀಪಾ ಸ್ವಾಗತಿಸಿದರು. ಶ್ರೀ ಎಸ್.ಡಿ. ಯಶವಂತ್ ವಂದಿಸಿದರು. ಡಾ. ಬಿ.ಎಸ್. ಹರೀಶ್ ನಿರೂಪಿಸಿದರು.

ರೈತರ ಶಿಬಿರ

# ಕೃಷಿಯಲ್ಲಿ ಆದಾಯದ ಕ್ರಾಂತಿಯಾಗಬೇಕು




ಸುತ್ತೂರು ಶ್ರೀಕ್ಷೇತ್ರದಲ್ಲಿ ರೈತರಿಗಾಗಿ ಆಯೋಜಿಸಿದ್ದ ಶಿಬಿರವನ್ನು ಶ್ರೀ ಅಶೋಕ್ ದಳವಾಯಿಯವರು ಉದ್ಘಾಟಿಸಿದರು. ಡಾ. ಎ.ಬಿ. ಪಾಟೀಲ್, ಡಾ. ಎಸ್.ವಿ. ಸುರೇಶ, ಸಂಚಾಲಕರು ಹಾಗೂ ರೈತರುಗಳಿದ್ದಾರೆ. (1 ಮೇ 2026)

ಭಾರತದ ಕೃಷಿರಂಗದಲ್ಲಿ ಆದಾಯದ ಕ್ರಾಂತಿಯಾಗಬೇಕಾಗಿದೆ ಎಂದು ಕರ್ನಾಟಕ ಕೃಷಿ ಬೆಲೆ ಆಯೋಗ ಹಾಗೂ ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅಶೋಕ್ ದಳವಾಯಿಯವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 1.5.20206ರಂದು ನಡೆದ ರೈತರ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿದರು. ದೇಶದ ಅಭಿವೃದ್ಧಿಯಲ್ಲಿ ರೈತರ ಕೊಡುಗೆ ಅಪಾರ. ಆದರೆ ದುರ್ಬಲ ಮಾರುಕಟ್ಟೆ, ಸಂಪರ್ಕ ಸಂವಹನ ಕೊರತೆಯಿಂದ ಆದಾಯ ಕಡಿಮೆಯಾಗಿದೆ. ಭಾರತದಲ್ಲಿ ವಿವಿಧ ಬಗೆಯ ಮಣ್ಣುಗಳಿವೆ. ಇದು ನಮಗೆ ಪ್ರಕೃತಿಯು ನೀಡಿದ ಅದ್ಭುತ ಕೊಡುಗೆಯಾಗಿದೆ. ಇದರಿಂದ ವಿವಿಧ ರೀತಿಯ ಬೆಳೆಗಳನ್ನು ಬೆಳೆಯಲು ಅನುಕೂಲವಾಗಿದೆ. ಹೆಚ್ಚಿನ ಇಳುವರಿಯೊಂದಿಗೆ ಅಧಿಕ ಪೌಷ್ಟಿಕಾಂಶಗಳಿರುವ ಆಹಾರ ಧಾನ್ಯಗಳನ್ನು ಬೆಳೆಯುವ ಕೃಷಿ ನಮ್ಮ ರೈತರಿಗೆ ಬೇಕಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಬಳಸಿ ತಾತ್ವಿಕ ಅಂಶಗಳಿಂದ ಕೃಷಿಯನ್ನು ಅಭಿವೃದ್ಧಿಪಡಿಸಬೇಕು ಎಂದು ನುಡಿದರು.

ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷರಾದ ಡಾ. ಎ.ಬಿ. ಪಾಟೀಲ್‌ರವರು ಸಾಂಪ್ರದಾಯಿಕ ಕೃಷಿ ಮತ್ತು ಆಧುನಿಕ ಕೃಷಿ ಒಂದೇ ನಾಣ್ಯದ ಎರಡು ಮುಖಗಳು. ಅತಿಯಾದ ನೀರಿನ ಬಳಕೆಯಿಂದ ಭೂಮಿ ಬಂಜರು ಭೂಮಿಯಾಗಿದೆ. ಅಂತರ್ಜಲ ಕುಸಿತವಾಗಿದೆ. ಆದುದರಿಂದ ಕಡಿಮೆ ನೀರನ್ನು ಬಳಸಬೇಕು. ರೈತರು ಬೆಳೆಗಳನ್ನು ಬೆಳೆಯುವುದರ ಜೊತೆಗೆ ಮಾರುಕಟ್ಟೆಯ

ಜ್ಞಾನವನ್ನು ಪಡೆದುಕೊಳ್ಳಬೇಕು. ಇದರಿಂದ ಹೆಚ್ಚಿನ ಆದಾಯವನ್ನು ಗಳಿಸಿಕೊಳ್ಳಬಹುದು ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎಸ್.ವಿ. ಸುರೇಶರವರು, ಜೀವನ ನಿಂತ ನೀರಾಗಬಾರದು, ಕಾಲಕ್ಕೆ ತಕ್ಕಂತೆ ಬದಲಾಗಬೇಕು. ಅಂತೆಯೆ ಕೃಷಿ ಪದ್ಧತಿಯಲ್ಲಿ ಬದಲಾವಣೆ ಕಾಣಬೇಕು. ಸಮತೋಲನ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಅತಿಯಾದ ರಾಸಾಯನಿಕ ಬಳಕೆಯನ್ನು ಕಡಿಮೆ ಮಾಡಿ, ವಿಷಮುಕ್ತ ಆಹಾರ ಪದಾರ್ಥಗಳನ್ನು ಬೆಳೆಯಬೇಕು. ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ವೈಜ್ಞಾನಿಕ ಕೃಷಿ ಪದ್ಧತಿಯನ್ನು ಬಳಸಿಕೊಂಡು ಉತ್ತಮ ಬೆಳೆಯನ್ನು ಬೆಳೆಯಬೇಕು, ಪ್ರತಿಯೊಬ್ಬ ರೈತನು ಉದ್ದಿಮೆದಾರ ಹಾಗೂ ಕೃಷಿ ರಾಯಭಾರಿಯಾಗಬೇಕು ಎಂದು ತಿಳಿಸಿದರು.

ಧಾರವಾಡದ ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ಚನ್ನಪ್ಪ ಅಂಗಡಿಯವರು, ಭಾರತದಲ್ಲಿ ಆಚರಿಸುವ ಹಬ್ಬಗಳು ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ್ದಾಗಿವೆ. ರೈತರು ಉಳುವ ಭೂಮಿಯನ್ನು ದೇವರಿಗೆ ಹೋಲಿಸಿ, ಪಾದರಕ್ಷೆಯನ್ನು ಧರಿಸದೆ ಕೆಲಸ ಮಾಡುವ ಸಂಸ್ಕೃತಿಯನ್ನು ಹೊಂದಿದ್ದಾರೆ. ಭಾರತೀಯ ಕೃಷಿಯು ಒಂದು ಸಂಸ್ಕೃತಿಯಾಗಿದೆ. ರೈತರು ತಮ್ಮ ಸಾಕು ಪ್ರಾಣಿಗಳನ್ನು ಕುಟುಂಬದ ಸದಸ್ಯರಂತೆ ಕಾಣುತ್ತಾರೆ. ಕೃಷಿಯು ಕೇವಲ ಆಹಾರ ಉತ್ಪಾದನೆ ಮಾಡುವುದಲ್ಲದೆ ಜೀವನದ ಮೇಲೆ ಆಳವಾದ ಪ್ರಭಾವ ಬೀರುತ್ತದೆ. ಕ್ರೀಡಾಪಟುಗಳು, ಸಿನಿಮಾ ಕಲಾವಿದರಿಗಿಂತ ರೈತರೇ ನಿಜವಾದ ಸೆಲೆಬ್ರೆಟಿಗಳು. ರೈತರಿಗೆ ದೇಶದಲ್ಲಿ ಉಜ್ವಲವಾದ ಭವಿಷ್ಯವಿದೆ ಎಂದು ಹೇಳಿದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಉಪಕುಲಪತಿಗಳಾದ ಡಾ. ವಿಠ್ಠಲ್ ಐ. ಬೆಣಗಿಯವರು ಭೂಮಿಯನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಮಣ್ಣಿನಲ್ಲಿ ಸಮಗ್ರ ಸಾವಯವ ಮತ್ತು ನೈಸರ್ಗಿಕ ಕೃಷಿಯು ರಾಸಾಯನಿಕ ಮುಕ್ತ, ಪರಿಸರ ಸ್ನೇಹಿ ಮತ್ತು ಸುಸ್ಥಿರ ಕೃಷಿಪದ್ಧತಿಯಾಗಿದೆ. ಮಣ್ಣಿನ ಆರೋಗ್ಯಕ್ಕೆ ವೈವಿಧ್ಯಮಯ ಬೆಳೆ ಪದ್ಧತಿ, ಜಾನುವಾರುಗಳ ಬಳಕೆ ಮತ್ತು ಸ್ಥಳೀಯ ಸಂಪನ್ಮೂಲಗಳ ಮರುಬಳಕೆ ಮಾಡಬೇಕು. ಹಸುವಿನ ಸಗಣಿ, ಗೋಮೂತ್ರ, ಜೀವಾಮೃತ ಮತ್ತು ಘನ ಜೀವಾಮೃತವನ್ನು ಸಾವಯವ ಕೃಷಿಯಲ್ಲಿ ಬಳಸಬೇಕು ಎಂದು ತಿಳಿಸಿದರು.

ಶ್ರೀ ಸಿ. ಮಹದೇವನಾಯಕ ಪ್ರಾರ್ಥಿಸಿದರು. ಡಾ. ಬಿ.ಎನ್. ಜ್ಞಾನೇಶ್ ಸ್ವಾಗತಿಸಿದರು. ಡಾ. ಜಿ.ಎಂ. ವಿನಯ್ ವಂದಿಸಿದರು. ಶ್ರೀಮತಿ ಹೆಚ್.ವಿ. ದಿವ್ಯಾ ಕಾರ್ಯಕ್ರಮ ನಿರೂಪಿಸಿದರು.

## ಮಿಶ್ರ ಬೆಳೆ ಲಾಭದ ಹೊಳೆ

ಮಿಶ್ರ ಬೆಳೆ ಲಾಭದ ಹೊಳೆ ಎಂದು ಶಿವಮೊಗ್ಗದ ಕೆಳದಿ ಶಿವಪ್ಪನಾಯಕ ಕೃಷಿ ತೋಟಗಾರಿಕೆ ವಿಶ್ವವಿದ್ಯಾಲಯದ ಅಡಿಕೆ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ನಾಗರಾಜಪ್ಪ ಅಡಿವಪ್ಪರ್‌ರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ರೈತರ ಶಿಬಿರದಲ್ಲಿ ಅವರು ಬೆಳೆ ವೈವಿಧ್ಯತೆ ಮತ್ತು ಮಿಶ್ರ ಬೆಳೆ ಪದ್ಧತಿಯ ವಿಷಯ ಕುರಿತು ಉಪನ್ಯಾಸ ನೀಡಿದರು. ವೈವಿಧ್ಯತೆ ಬೆಳೆ ಮತ್ತು ಮಿಶ್ರ ಬೆಳೆ ಪದ್ಧತಿಗಳು ಸುಸ್ಥಿರ ಕೃಷಿಯ ಎರಡು ಪ್ರಮುಖ ಸ್ತಂಭಗಳಾಗಿವೆ. ರೈತರಿಗೆ ಲಾಭವನ್ನು ಹೆಚ್ಚಿಸಲು ಮತ್ತು ಪರಿಸರವನ್ನು ರಕ್ಷಿಸಲು ಸಹಾಯ ಮಾಡುತ್ತವೆ. ರೈತರು ಮಿಶ್ರ ಬೆಳೆಗೆ ಪ್ರಥಮ ಆದ್ಯತೆ ನೀಡಬೇಕು. ಕೃಷಿಯಲ್ಲಿ ಪ್ರಾಮಾಣಿಕತೆ, ಬೆಳೆಗಳ ಬಗ್ಗೆ



ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿದ್ದ ರೈತರ ಶಿಬಿರದಲ್ಲಿ ಡಾ. ನಾಗರಾಜಪ್ಪ ಅಡಿವೆಪ್ಪರ್ ಹಾಗೂ ಡಾ. ಎಚ್.ವಿ. ಬಿಂದುರವರುಗಳು ಉಪನ್ಯಾಸ ನೀಡಿದರು. (2 ಮೇ 2026)

ನಂಬಿಕೆ ಇರಬೇಕು. ಪೂರ್ಣ ಪ್ರಮಾಣದಲ್ಲಿ ಕೃಷಿಯಲ್ಲಿ ತೊಡಗಿದಾಗ ಲಾಭ ಗಳಿಸಲು ಸಾಧ್ಯವಿದೆ. ಮುಂಗಾರು ಮತ್ತು ಹಿಂಗಾರು ಬೆಳೆ ಬೆಳೆಯುವಾಗ ಮಿಶ್ರ ಬೆಳೆಗಳಿಗೆ ಆದ್ಯತೆ ನೀಡಬೇಕು. ಮಿಶ್ರ ಬೆಳೆಗಳು ಉತ್ತಮ ಫಲ ನೀಡುತ್ತವೆ ಎಂದು ಹೇಳಿದರು.

ಡಾ. ಎಚ್.ವಿ. ಬಿಂದುರವರು, ಸಾವಯವ ಕೃಷಿಯು ಕ್ಷೀಣಿಸುತ್ತಿರುವ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿ ಪರಿಸರದಲ್ಲಿ ಸಮತೋಲನ ಕಾಪಾಡುತ್ತದೆ. ಆರೋಗ್ಯಕರ ಮತ್ತು ಸುರಕ್ಷಿತ ಆಹಾರ ಎಂದರೆ ಪೌಷ್ಟಿಕಾಂಶಯುಕ್ತ ತಾಜಾ ಆಹಾರವಾಗಿದೆ. ಸಾವಯವ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆಯಿದೆ. ರೈತರು ಬಿತ್ತನೆಯಿಂದ ಕೊಯ್ಲಿನವರೆಗೆ ಪ್ರಕ್ರಿಯೆಗಳನ್ನು ವೈಜ್ಞಾನಿಕವಾಗಿ ಯೋಚಿಸಬೇಕು. ಸಾಲ ಸೌಲಭ್ಯ, ವಿಮೆ ಮತ್ತು ಉತ್ಪಾದನಾ ವೆಚ್ಚದ ಸರಿಯಾದ ಲೆಕ್ಕಾಚಾರ ಮಾಡಬೇಕು. ಕೃಷಿ ಮಾರುಕಟ್ಟೆ ಸಮಿತಿಯ ಮೂಲಕ ತಾಂತ್ರಿಕ ಹಾಗೂ ಮಾರುಕಟ್ಟೆಯ ತರಬೇತಿಯನ್ನು ಪಡೆಯಬಹುದು. ಕೃಷಿ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಕರ್ನಾಟಕ ಸರ್ಕಾರವು 162ಕ್ಕೂ ಹೆಚ್ಚು ಮಾರುಕಟ್ಟೆಗಳಲ್ಲಿ ಅವಕಾಶ ಕಲ್ಪಿಸಿದೆ. ಇದರಿಂದ ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುತ್ತದೆ. ಕೃಷಿ ವ್ಯವಹಾರವು ಕೇವಲ ಬೇಸಾಯವಲ್ಲದೆ, ಅದನ್ನು ಒಂದು ಉದ್ಯಮವಾಗಿ ಪರಿಗಣಿಸಬೇಕು. ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಕೃಷಿ ಉತ್ಪಾದನೆಯನ್ನು ನಿರ್ವಹಿಸಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದು ತಿಳಿಸಿದರು.

ಕಲ್ಯಾಣಕೈಲಾಸವೆಂಬ ನುಡಿ ಹಸನಾಯಿತ್ತು
ಒಳಗೂ ಕಲ್ಯಾಣ ಹೊರಗೂ ಕಲ್ಯಾಣ
ಇದರಂತುವನಾರು ಬಲ್ಲರಯ್ಯಾ?
ನಿಮ್ಮ ಸತ್ಯ ಶರಣರ ಸುಳುಹು ತೋರುತ್ತಿದೆಯಯ್ಯಾ
ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ
ತವಕವೆನಗಾಯಿತ್ತು ಕೇಳಾ
ಚೆನ್ನಮಲ್ಲಿಕಾರ್ಜುನಾ

**ಅಕ್ಕಮಹಾದೇವಿ**

# ನೈಸರ್ಗಿಕ ಕೃಷಿಗೆ ಮಣ್ಣಿನ ಆರೋಗ್ಯ ಅಗತ್ಯ




ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ರೈತರ ಶಿಬಿರದಲ್ಲಿ ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಪಿ.ಎಲ್. ಪಾಟೀಲ್‌ರವರು ಸಮಾರೋಪ ಭಾಷಣ ಮಾಡಿದರು. ಡಾ. ಎಸ್.ಎಂ. ಶಿವಪ್ರಕಾಶ್, ಡಾ. ಜಿ.ಎಂ. ದೇವಗಿರಿಯವರುಗಳಿದ್ದಾರೆ. ಪಕ್ಕದ ಚಿತ್ರದಲ್ಲಿ ಶಿಬಿರಾರ್ಥಿಗಳು ಹಾಗೂ ಸಂಚಾಲಕರುಗಳಿದ್ದಾರೆ. (3 ಮೇ 2026)

ನೈಸರ್ಗಿಕ ಕೃಷಿ ಮತ್ತು ಮಣ್ಣಿನ ಆರೋಗ್ಯ ಅಗತ್ಯ ಎಂದು ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಪಿ.ಎಲ್. ಪಾಟೀಲ್‌ರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 3.5.2026 ರಂದು ನಡೆದ ರೈತರ ಶಿಬಿರದ ಸಮಾರೋಪ ಭಾಷಣ ಮಾಡುತ್ತಾ ಅವರು ತಿಳಿಸಿದರು. ರೈತ ದೇಶದ ಬೆನ್ನೆಲುಬು. ಈ ಭೂಮಿಯ ಜೀವನಾಡಿಯಾದ ರೈತ ಸಮೃದ್ಧಿಯಾಗಿದ್ದರೆ ಮಾತ್ರ ದೇಶ ಸುಭಿಕ್ಷವಾಗಿರುತ್ತದೆ. ಸ್ವಾಭಿಮಾನದ ಕೃಷಿ ನಮ್ಮದಾಗಲಿ. ಜಗತ್ತು ಎಷ್ಟೇ ಆಧುನಿಕವಾದರೂ ಮನುಷ್ಯ ಕಂಪ್ಯೂಟರ್ ಚಿಪ್ ತಿಂದು ಬದುಕಲಾರ. ಅವನಿಗೆ ಬೇಕಿರುವುದು ರೈತರು ಬೆವರಿಸಿ ಬೆಳೆದ ಅನ್ನದ ತುತ್ತು. ಸೈನಿಕ ದೇಶದ ಗಡಿ ಕಾಯ್ದರೆ, ರೈತ ದೇಶದ ಹಸಿವನ್ನು ನೀಗಿಸುತ್ತಾನೆ. ರೈತರು ಸೋಲಬಾರದು. ಕೇವಲ ಬೆವರಿನಿಂದ ಕೆಲಸ ಮಾಡುವುದಷ್ಟೇ ಅಲ್ಲ, ಜ್ಞಾನದಿಂದ ಕೆಲಸ ಮಾಡಬೇಕು ಎಂದು ತಿಳಿಸಿದರು.

ಬೀದರ್‌ನ ಕರ್ನಾಟಕ ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ನಿವೃತ್ತ ವಿಸ್ತರಣ ನಿರ್ದೇಶಕರಾದ ಡಾ. ಎಸ್.ಎಂ. ಶಿವಪ್ರಕಾಶ್‌ರವರು ಪ್ರಾಮಾಣಿಕವಾಗಿ ದುಡಿದಾಗ ಪ್ರತಿ ರೈತರು ಯಶಸ್ಸು ಗಳಿಸಲು ಸಾಧ್ಯ. ರೈತನ ಮೊಗದಲ್ಲಿ ನಗು ಚಿಮ್ಮಿದಾಗ, ವಿಶ್ವವೇ ಸಂತೋಷ ಪಡುತ್ತದೆ. ಪರಮ ಸಂತೋಷ ಮತ್ತು ಪರಮಶಾಂತಿಯನ್ನು ಪಡೆಯಲು ಜೀವನವನ್ನು ಸರಸವುಂಯುವಾಗಿ ಮತ್ತು ಸಂತೋಷವಾಗಿಡಬೇಕು ಎಂದು ತಿಳಿಸಿದರು.

ಮಂಡ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ

ಸಂಶೋಧನಾ ನಿರ್ದೇಶಕರಾದ ಡಾ. ಜಿ.ಎಂ. ದೇವಗಿರಿಯವರು ಮಾತನಾಡಿ, ರೈತನ ಬೆವರಿನ ಹನಿ ಭೂಮಿಗೆ ಬಿದ್ದರೆ ಮುತ್ತು ಬೆಳೆಯುತ್ತದೆ. ಆ ಮುತ್ತಿಗೆ ಸರಿಯಾದ ಬೆಲೆ ಸಿಕ್ಕಾಗ ಮಾತ್ರ ಅವನ ಬದುಕು ಚೆನ್ನವಾಗುತ್ತದೆ. ರೈತರು ತಮ್ಮ ಜಮೀನಿನ ಒಂದು ಭಾಗದಲ್ಲಾದರೂ ಹೊಸ ಪ್ರಯೋಗಗಳನ್ನು ಮಾಡಲು ಮುಂದಾಗಬೇಕು. ನಾವು ಬೆಳೆದ ಬೆಳೆಯನ್ನು ಹಾಗೆಯೇ ಮಾರುವ ಬದಲು ಅದಕ್ಕೆ ಮೌಲ್ಯವರ್ಧನೆ ಮಾಡುವುದನ್ನು ತಿಳಿಯಬೇಕು. ಕೇವಲ ಕಾಯಕದಿಂದ ಮಾತ್ರವಲ್ಲದೆ, ಕೌಶಲದಿಂದಲೂ ಕೃಷಿ ಮಾಡಬೇಕಾದ ಕಾಲ ಇದಾಗಿದೆ ಎಂದು ತಿಳಿಸಿದರು.

ಬೆಂಗಳೂರಿನ ರಾಜಮುಡಿ ಆರ್ಗೆನಿಕ್ಸ್ ಪ್ರೈ.ಲಿ. ಕೃಷಿ ಉತ್ಪನ್ನಗಳ ರಫ್ತುದಾರರಾದ ಶ್ರೀ ಹೆಚ್. ನಾಗೇಂದ್ರ ಕುಮಾರ್‌ರವರು ಬೇಡಿಕೆಯಿರುವ ಆಹಾರ ಉತ್ಪನ್ನಗಳನ್ನು ಬೆಳೆಯಬೇಕು. ಉತ್ಪನ್ನಕ್ಕೆ ಬೇಡಿಕೆಯಿರುವ ವಿದೇಶಿ ಮಾರುಕಟ್ಟೆಯನ್ನು ಗುರುತಿಸಬೇಕು. ಅಂತಾರಾಷ್ಟ್ರೀಯ ಮಾರುಕಟ್ಟೆಗೆ ತಕ್ಕಂತೆ ಆಕರ್ಷಕ ಮತ್ತು ಗುಣಮಟ್ಟದ ಪ್ಯಾಕೇಜಿಂಗ್ ಅಗತ್ಯ. ಬೆಲೆ ನಿಗದಿಗೊಳಿಸಿ ಒಪ್ಪಂದ ಮಾಡಿಕೊಳ್ಳಬೇಕು. ಕರ್ನಾಟಕ ಸರ್ಕಾರವು ನಿಗಮದ ಮೂಲಕ ರೈತರಿಗೆ ಕೃಷಿ ಉತ್ಪನ್ನಗಳ ರಫ್ತು ಮತ್ತು ಮಾರುಕಟ್ಟೆ ವಿಸ್ತರಣೆಗೆ ಬೆಂಬಲ ನೀಡುತ್ತದೆ. ಆಹಾರ ಧಾನ್ಯಗಳು, ಮಸಾಲೆ ಪದಾರ್ಥಗಳು, ಡೈರಿ ಉತ್ಪನ್ನಗಳು, ಸಮುದ್ರಾಹಾರಗಳು ಮತ್ತು ಸಸ್ಯಾಧಾರಿತ ಪ್ರೋಟೀನ್‌ಗಳ ಸಂಸ್ಕರಣೆ ಮತ್ತು ರಫ್ತಿಗೆ, ನವೋದ್ಯಮಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸುತ್ತದೆ. ಉತ್ತಮ ಉತ್ಪನ್ನಗಳ ಆಯ್ಕೆ, ಸರಿಯಾದ ದಾಖಲೆಗಳು ಮತ್ತು ನಂಬಿಕಸ್ತ ಖರೀದಿದಾರರನ್ನು ಕಂಡುಕೊಳ್ಳುವ ಮೂಲಕ ರಫ್ತು ವ್ಯವಹಾರದಲ್ಲಿ ಯಶಸ್ಸು ಕಾಣಲು ಸಾಧ್ಯ ಎಂದು ತಿಳಿಸಿದರು.

ಶ್ರೀ ಗಣೇಶ್, ಶ್ರೀಮತಿ ಕಾವೇರಮ್ಮ ಬೈಲೆಮನೆ, ಶ್ರೀ ಅನಂತರಾಮಸ್ವಾಮಿ, ಶ್ರೀ ಜಗದೀಶ್ ಎಸ್. ಹಿರೇಮಠ್, ಶ್ರೀ ಶಿವಕುಮಾರ್ ಅನಿಸಿಕೆಯನ್ನು ಹಂಚಿಕೊಂಡರು.

ಡಾ. ಬಿ.ಎನ್. ಜ್ಞಾನೇಶ್ ಶಿಬಿರದ ವರದಿ ಮಂಡಿಸಿದರು. ಶ್ರೀ ಪೃಥ್ವಿ ಪ್ರಾರ್ಥಿಸಿದರು. ಡಾ. ಯು.ಎಂ. ರಕ್ಷಿತ್ ರಾಜ್ ಸ್ವಾಗತಿಸಿದರು. ಡಾ. ದೀಪಕ್ ವಂದಿಸಿದರು. ಡಾ. ವೈ.ಪಿ. ಪ್ರಸಾದ್ ನಿರೂಪಿಸಿದರು.

**ಜೆಎಸ್‌ಎಸ್ ವಾರ್ತಾಪತ್ರಕ್ಕೆ ಕಳುಹಿಸುವ**
**ವರದಿಗಳು ಮತ್ತು ಛಾಯಾಚಿತ್ರಗಳನ್ನು ಕಡ್ಡಾಯವಾಗಿ**
**varthapathra@jssonline.org ಗೆ ಮಾತ್ರ ಕಳುಹಿಸುವುದು.**
**ಬೇರೆ ಯಾವುದೇ ಇಮೇಲ್‌ಗೆ ಕಳುಹಿಸಬಾರದು.**

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**
**ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು**
**ದೂರವಾಣಿ : 9663151846, 9480771995**
**8861654566, 9964161363**

ಜೀವನೋತ್ಸಾಹ ಶಿಬಿರ

# ಮಾನವೀಯ ಮೌಲ್ಯಗಳಿಂದ ಜೀವನ ಸುಂದರ



ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ ನಡೆದ ಜೀವನೋತ್ಸಾಹ ಶಿಬಿರವನ್ನು ನಿವೃತ್ತ ಐಜಿಪಿ ಶ್ರೀ ಡಿ.ಎನ್. ಮುನಿಕೃಷ್ಣ ಅವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಶ್ರೀಮತಿ ಪ್ರೇಮ ಸೋಮಸುಂದರಂ, ಶ್ರೀ ಕೆ.ಸಿ. ವಿರೂಪಾಕ್ಷ, ಕರ್ನಲ್ ಶ್ರೀ ಪಿ.ಎಲ್. ರಾಘವೇಂದ್ರ ಹಾಗೂ ಶಿಬಿರಾರ್ಥಿಗಳನ್ನು ಕಾಣಬಹುದು. (6 ಮೇ 2026)

ಮಾನವೀಯ ಮೌಲ್ಯಗಳಿಂದ ಜೀವನವನ್ನು ಸುಂದರವಾಗಿಸಲು ಸಾಧ್ಯ ಎಂದು ನಿವೃತ್ತ ಐಜಿಪಿಯವರಾದ ಶ್ರೀ ಡಿ.ಎನ್. ಮುನಿಕೃಷ್ಣರವರು ಹೇಳಿದರು.

ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರವನ್ನು ದಿನಾಂಕ 6.5.2026 ರಂದು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮೊಳಗಿನ ಮಾನವೀಯತೆ ಜಾಗೃತಗೊಳ್ಳಲು ಜೀವನೋತ್ಸಾಹ ಶಿಬಿರಗಳು ಅಗತ್ಯ. ನಾವು ಜೀವನವನ್ನು ಒಳ್ಳೆಯ ರೀತಿಯಲ್ಲಿ ನಡೆಸಲು ಸದ್ಭಾವನೆ ಮುಖ್ಯ. ಪದವಿ, ಪುರಸ್ಕಾರಗಳಿಗಿಂತ ನಿಸ್ವಾರ್ಥ ಸೇವೆಯೇ ನಿಜವಾದ ಸಾಧನೆಯಾಗಿದೆ. ಆಧುನಿಕ ಯುಗದಲ್ಲಿ ಜನರು ಜೀವನೋತ್ಸಾಹ ಕಳೆದುಕೊಳ್ಳುತ್ತಿದ್ದಾರೆ. ಇಂತಹ ಶಿಬಿರಗಳಿಂದ ಉತ್ಸಾಹ ತುಂಬಲು ಸಾಧ್ಯ. ಸುತ್ತೂರು ಶ್ರೀಗಳವರು ದೂರದೃಷ್ಟಿಯಿಂದ ಶಿಬಿರವನ್ನು ಆಯೋಜಿಸಿರುವುದು ನಿಮ್ಮೆಲ್ಲರ ಸೌಭಾಗ್ಯ ಎಂದು ಹೇಳಿದರು.

ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿಗಳಾದ ಶ್ರೀ ಕೆ.ಸಿ. ವಿರೂಪಾಕ್ಷರವರು, ನಮ್ಮ ಬದುಕು ಪ್ರಾಮಾಣಿಕವಾಗಿರಬೇಕು. ಮಾಡುವ ಕೆಲಸಗಳಲ್ಲಿ ಆಸಕ್ತಿ ಮತ್ತು ಶ್ರದ್ಧೆ ಇರಬೇಕು. ವೈಯಕ್ತಿಕ ಬದುಕು ಆದರ್ಶವಾಗಿದ್ದು, ಎಲ್ಲರನ್ನೂ ಪ್ರೀತಿಸುವ ಗುಣವನ್ನು ಮತ್ತು ಸಹಜ ಬದುಕನ್ನು ರೂಢಿಸಿಕೊಳ್ಳಲು ಶರಣರ ಚಿಂತನೆಗಳು ಸ್ಫೂರ್ತಿಯಾಗಿವೆ ಎಂದು ತಿಳಿಸಿದರು.

ಭಾರತೀಯ ಸೇನೆಯ ಸೇನಾ ಪದಕ ಪುರಸ್ಕೃತರಾದ ಕರ್ನಲ್ ಪಿ.ಎಲ್ ರಾಘವೇಂದ್ರರವರು, ಇಂದಿನ ಜನರ ಮನಸ್ಥಿತಿ ಚಂಚಲವಾಗುತ್ತಿದೆ. ಪೋಷಕರು ತಮ್ಮ ಮಕ್ಕಳ ಕೈಯಲ್ಲಿ ಮೊಬೈಲ್ ಫೋನ್ ಕೊಟ್ಟು ಅವರ ಬೌದ್ಧಿಕತೆಗೆ ವಿಷವನ್ನು ನೀಡಲಾಗುತ್ತಿದೆ. ಮಕ್ಕಳಲ್ಲಿ ತಾಳ್ಮೆ ಕಡಿಮೆಯಾಗುತ್ತಿದ್ದು, ಏಕಾಗ್ರತೆ ಕಳೆದುಕೊಳ್ಳುತ್ತಿದ್ದಾರೆ. ಮಕ್ಕಳಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನು ಬೆಳೆಸಬೇಕು. ಮನುಷ್ಯ ಮತ್ತು ಪ್ರಕೃತಿ ನಡುವಿನ ಸಂಬಂಧ ಗಾಢವಾಗಿದ್ದಲ್ಲಿ ದೈವತ್ವ ಪ್ರಾಪ್ತಿಯಾಗುತ್ತದೆ ಎಂದು ತಿಳಿಸಿದರು.

ಶಿವಮೊಗ್ಗ ಬಸವ ಮಂದಿರದ ಅಧ್ಯಕ್ಷರಾದ ಡಾ. ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳು, ಭಾರತೀಯ ತತ್ವಜ್ಞಾನ ಮತ್ತು ಯೋಗ ಪರಂಪರೆಯಲ್ಲಿ ಯೋಗಗಳ ರಾಜನೆಂದು ಶಿವಯೋಗವನ್ನು ಕರೆಯಲಾಗಿದೆ. ಇದು ಕರ್ಮಯೋಗ, ಹಠಯೋಗ ಮತ್ತು ಭಕ್ತಿಯೋಗಗಳ ಸಮನ್ವಯವಾಗಿದೆ. ಶಿವಯೋಗವು ಅಂತರಂಗದ ದೇವನನ್ನು ಇಷ್ಟಲಿಂಗದ ಮೂಲಕ ಸಾಕ್ಷಾತ್ಕರಿಸಿಕೊಳ್ಳುವ ಅತ್ಯುನ್ನತ ಯೋಗ ಮಾರ್ಗವಾಗಿದೆ ಎಂದು ತಿಳಿಸಿದರು.

ಶಿಕ್ಷಣ ತಜ್ಞರು ಹಾಗೂ ವಾಗ್ಮಿಗಳಾದ ಶ್ರೀ ಮಹೇಶ್ ಮಾಶಾಳರವರು, ನಾವು ಕಷ್ಟದ ಸಂದರ್ಭಗಳಲ್ಲಿ, ಕೋಪ ಅಥವಾ ಅಸಮಾಧಾನವನ್ನು ತೋರಿಸಬಾರದು. ಸಮಸ್ಯೆಗಳನ್ನು ಸ್ಥಿರ ಹಾಗೂ ಶಾಂತಿಯುತ ಮನಸ್ಸಿನಿಂದ ಎದುರಿಸಬೇಕು. ಯಾವುದೇ ಸಂದರ್ಭದಲ್ಲೂ ತಾಳ್ಮೆ ಕಳೆದುಕೊಳ್ಳದೆ ಬದುಕುವುದೇ ನಿಜವಾದ ಸಹನಶೀಲತೆ ಎಂದು ತಿಳಿಸಿದರು.

ಶಿಬಿರದಲ್ಲಿ ಮೈಸೂರು, ಬೆಂಗಳೂರು, ಚಾಮರಾಜನಗರ, ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ, ರಾಯಚೂರು, ಬಾಗಲಕೋಟೆ, ಗದಗ, ಬೆಳಗಾವಿ, ಗುಲ್ಬರ್ಗ, ಬೀದರ್ ಹಾಗೂ ವಿಜಯಪುರ ಜಿಲ್ಲೆಗಳಿಂದ 235 ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ.

## ಜಾನಪದ ಎಲ್ಲಾ ವಿಜ್ಞಾನಗಳ ತಾಯಿಬೇರು

ಜಾನಪದ ಎಲ್ಲಾ ವಿಜ್ಞಾನಗಳ ತಾಯಿ ಬೇರು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಹಿ.ಚಿ. ಬೋರಲಿಂಗಯ್ಯನವರು ಹೇಳಿದರು.

ಊಟಿಯ ತೀಟಕಲ್‌ನ ಜೆಎಸ್ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ ದಿನಾಂಕ 7.5.2026ರಂದು 'ಜಾನಪದ ಬದುಕು' ವಿಷಯ ಕುರಿತು ಉಪನ್ಯಾಸ ನೀಡಿದರು. ಜಾನಪದ ಬದುಕು ಇಡೀ ಸಂಸ್ಕೃತಿಯ ಒಂದು ಭಾಗವಾಗಿದೆ. ಗ್ರಾಮೀಣ ಜನರ ಜೀವನ ಶೈಲಿ ನಂಬಿಕೆ, ಆಚರಣೆ, ಕಲೆ ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರತಿಬಿಂಬವಾಗಿದೆ. ಇದು ನಮ್ಮ ಪುರಾತನರ ಜೀವನ ಪ್ರೀತಿಯನ್ನು ಎತ್ತಿ ಹಿಡಿಯುತ್ತದೆ. ಶ್ರಮ ಜೀವನವೇ ಜಾನಪದರ ಬದುಕಿನ ಮೂಲ ಮಂತ್ರವಾಗಿದ್ದು, ಅವರ ಬದುಕು ಸರಳ ಮತ್ತು ಘನತೆಯಿಂದ ಕೂಡಿತ್ತು ಎಂದು ತಿಳಿಸಿದರು.

ವಕೀಲರಾದ ಶ್ರೀ ವಿಶ್ವನಾಥ್ ಎಂ. ಹಿರೇಮಠರವರು, ಕೂಡು ಕುಟುಂಬವು ಪ್ರೀತಿ, ಭದ್ರತೆ, ಜವಾಬ್ದಾರಿ ಹಂಚಿಕೆ ಮತ್ತು ಒಗ್ಗಟ್ಟನ್ನು ಕಲಿಸುತ್ತದೆ. ಅವಿಭಕ್ತ ಕುಟುಂಬದಲ್ಲಿ ಭಾವನಾತ್ಮಕತೆ, ಸಂವಹನ ಮತ್ತು ಅನ್ಯೋನ್ಯತೆ ಬೆಳೆಯುತ್ತದೆ. ಹೊಂದಾಣಿಕೆ ಮತ್ತು ಪರಸ್ಪರ ಗೌರವವಿದ್ದರೆ ಕೂಡು ಕುಟುಂಬವು ಸುಂದರವಾದ ಸ್ವರ್ಗ ಸದೃಶ




ಊಟಿಯ ತೀಟಕಲ್‌ನ ಜೆಎಸ್ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ ಡಾ. ಹೀ.ಚಿ. ಬೋರಲಿಂಗಯ್ಯ, ಶ್ರೀ ವಿಶ್ವನಾಥ್ ಎಂ. ಹಿರೇಮಠ, ಶ್ರೀ ಎಂ.ಡಿ. ಶರತ್‌ರವರು ಉಪನ್ಯಾಸ ನೀಡಿದರು. (7 ಮೇ 2026)

ಬದುಕನ್ನು ನೀಡುತ್ತದೆ ಎಂದು ತಿಳಿಸಿದರು.

ಬೆಂಗಳೂರಿನ ಆರ್ಥಿಕ ಅಪರಾಧ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿಯಾದ ಶ್ರೀ ಎಂ.ಡಿ. ಶರತ್‌ರವರು ಅಂತರ್ಜಾಲದ ಅತಿಯಾದ ಮತ್ತು ಅಜಾಗರೂಕತೆಯ ಬಳಕೆಯಿಂದ ಹಲವು ರೀತಿಯ ಆತಂಕಗಳನ್ನು ಎದುರಿಸಬೇಕಾಗುತ್ತದೆ. ಅಂತರ್ಜಾಲವು ಆಧುನಿಕ ಜೀವನದ ಅವಿಭಾಜ್ಯ ಅಂಗವಾಗಿದ್ದರೂ ವೈಯಕ್ತಿಕ ವಿವರಗಳನ್ನು ಜೋಪಾನವಾಗಿರಿಸಿಕೊಳ್ಳಬೇಕಾದದ್ದು ನಾಗರಿಕರ ಜವಾಬ್ದಾರಿ. ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಮಿತಿ ಇರಬೇಕು. ಅನಕ್ಷರಸ್ಥರಿಗಿಂತ ಅಕ್ಷರಸ್ಥರೇ ಅಂತರ್ಜಾಲದ ಮೂಲಕ ಹೆಚ್ಚು ವಂಚನೆಗೆ ಒಳಗಾಗುತ್ತಿದ್ದಾರೆ ಎಂದು ತಿಳಿಸಿದರು.

## ಪ್ರೀತಿಯ ಮಾತುಗಳಿಂದ ಸಮಸ್ಯೆಗಳಿಗೆ ಪರಿಹಾರ

ಪ್ರೀತಿಯ ಮಾತುಗಳಿಂದ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್‌ರವರು ಹೇಳಿದರು.

ಊಟಿಯ ತೀಟಕಲ್‌ನ ಜೆಎಸ್ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ ದಿನಾಂಕ 9.5.2026 ರಂದು ಅವರು 'ಬದುಕು ಹೇಗಿದ್ದರೆ ಚಂದ' ವಿಷಯ ಕುರಿತು




ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಸಾರ್ವಜನಿಕರಿಗಾಗಿ ಏರ್ಪಡಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ 'ವಿಶ್ವವಾಣಿ' ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್‌ರವರು ಉಪನ್ಯಾಸ ನೀಡಿದರು. (9 ಮೇ 2026)

ಉಪನ್ಯಾಸ ನೀಡಿದರು. ಮನುಷ್ಯನು ತನ್ನ ಆತ್ಮ ಸಾಕ್ಷಿಗೆ ಅನುಗುಣವಾಗಿ ಬದುಕು ರೂಢಿಸಿಕೊಳ್ಳಬೇಕು. ದಯೆ, ಕರುಣೆ, ಕಾಳಜಿಯಿಂದ ಜೀವನದ ಗುಣಮಟ್ಟ ಹೆಚ್ಚುತ್ತದೆ. ನಮ್ಮ ಶಿಸ್ತಿನ ಗುಣಗಳು ಸುತ್ತಮುತ್ತಲಿನವರ ಮೇಲೆ ಧನಾತ್ಮಕ ಪ್ರಭಾವ ಬೀರುತ್ತವೆ. ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಇಂತಹ ಶಿಬಿರಗಳು ದಾರಿದೀಪವಾಗುತ್ತವೆ ಎಂದು ತಿಳಿಸಿದರು.

ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು, ಉತ್ತಮ ಸಂಸ್ಕಾರ ಬೆಳೆಸಿಕೊಂಡು ಬದುಕುವುದೇ ಅಲೌಕಿಕ ಸಾಧನೆಯಾಗಿದೆ. ಮನುಷ್ಯನು ಅರಿವಿನಿಂದ ಮಾಡುವ ಕಾರ್ಯಗಳೆಲ್ಲವು ಅಲೌಕಿಕವಾದವು. ಬದುಕಿನ ಅನಿತ್ಯತೆಯನ್ನು ತಿಳಿದು ನಿಷ್ಕಾಮ ಕರ್ಮದ ಮೂಲಕ ಸಾಗುವುದೆ ಪಾರಮಾರ್ಥಿಕ. ಆತ್ಮಾವಲೋಕನ ಮತ್ತು ತ್ಯಾಗದ ಮೂಲಕ ಲೌಕಿಕ ಜವಾಬ್ದಾರಿಗಳನ್ನು ನಿಭಾಯಿಸಬೇಕು. ಪ್ರತಿಯೊಂದು ಕಾರ್ಯ ಮತ್ತು ವಸ್ತುವಿನಲ್ಲಿ ಭಗವಂತನನ್ನು ಕಾಣುವ ಮೂಲಕ ಆತ್ಮಸಾಕ್ಷಾತ್ಕಾರ ಪಡೆಯಬಹುದು ಎಂದು ಹೇಳಿದರು.

ಡಾ. ರಾಹುಲ್ ದೇವರಾಜ್‌ರವರು, ಭಾರತವು ಜಗತ್ತಿನ ಹಲವು ಧರ್ಮಗಳ ಜನ್ಮ ಭೂಮಿಯಾಗಿದೆ, ವಿನೂತನ ಆವಿಷ್ಕಾರಗಳನ್ನು ಪ್ರಪಂಚಕ್ಕೆ ಕೊಟ್ಟ ಕರ್ಮ ಭೂಮಿ ಇದು. ಆಧ್ಯಾತ್ಮಿಕತೆ, ತತ್ವಶಾಸ್ತ್ರ, ಪ್ರೀತಿ, ಶಾಂತಿ, ತ್ಯಾಗ ಮತ್ತು ಸಾಮರಸ್ಯ ಇಲ್ಲಿ ಎಲ್ಲರಲ್ಲಿ ಹಾಸುಹೊಕ್ಕಾಗಿದೆ. ಪ್ರಾಚೀನ ಪರಂಪರೆಯನ್ನು ಉಳಿಸಿಕೊಂಡು ಇಂದಿನ ತಂತ್ರಜ್ಞಾನ ಮತ್ತು ಜಾಗತೀಕರಣಕ್ಕೂ ತೆರೆದುಕೊಂಡ ಸಂಸ್ಕೃತಿಯಾಗಿದೆ. ವಸುದೈವ ಕುಟುಂಬಕಂ ಎಂಬಂತೆ ವೈವಿಧ್ಯತೆ ಮತ್ತು ಏಕತೆಯನ್ನು ಪ್ರತಿಬಿಂಬಿಸುವ ಜಗತ್ತಿನ ಏಕೈಕ ರಾಷ್ಟ್ರ ಎಂದು ತಿಳಿಸಿದರು.

# ನೈಜ ಸುದ್ದಿಯು ಸತ್ಯಾಂಶ ಮತ್ತು ಪಾರದರ್ಶಕತೆಯಿಂದ ಕೂಡಿರಬೇಕು



ಊಟಿಯ ತೀಟಕಲ್‌ನ ಜೆಎಸ್ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ ಶ್ರೀಮತಿ ಶೋಭಾ ಮಳವಳ್ಳಿ, ಶ್ರೀಮತಿ ಕುಸುಮ ಆಯರಹಳ್ಳಿ ಹಾಗೂ ಶ್ರೀ ಬೇಲೂರು ರಾಮಮೂರ್ತಿಯವರುಗಳು ಉಪನ್ಯಾಸ ನೀಡಿದರು. (10 ಮೇ 2026)

ಸತ್ಯಾಂಶಗಳ ಆಧಾರದ ಮೇಲೆ ನಿಖರತೆ ಮತ್ತು ಪಾರದರ್ಶಕವಾಗಿರುವುದೇ ನೈಜ ಸುದ್ದಿ ಎಂದು ಹಿರಿಯ ಪತ್ರಕರ್ತರಾದ ಶ್ರೀಮತಿ ಶೋಭಾ ಮಳವಳ್ಳಿಯವರು ಹೇಳಿದರು.

ಊಟಿಯ ತೀಟಕಲ್ ನ ಜೆಎಸ್ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರದಲ್ಲಿ ದಿನಾಂಕ 10.5.2026ರಂದು ಅವರು 'ನೈಜ ಸುದ್ದಿ' ವಿಷಯ ಕುರಿತು ಉಪನ್ಯಾಸ ನೀಡಿದರು. ಪೂರ್ವಾಗ್ರಹ ಪೀಡಿತರಾಗದೆ ವಸ್ತುನಿಷ್ಠವಾಗಿ ಸುದ್ದಿ ನೀಡಬೇಕಾದ ಜವಾಬ್ದಾರಿ ಪತ್ರಕರ್ತರಿಗೆ ಇರಬೇಕು. ಯಾವುದೇ ವಾಹಿನಿಗಳು ಸುದ್ದಿಗಳನ್ನು ವೈಭವೀಕರಿಸದೆ ಪಸರಿಸುವುದು ಸವಾಲಿನ ಕೆಲಸವಾಗಿದೆ. ನಕಲಿ ಸುದ್ದಿಗಳ ಯುಗದಲ್ಲಿ ಅಧಿಕೃತ ಮೂಲಗಳಿಂದ ದೃಢೀಕರಿಸಲ್ಪಟ್ಟ ಮಾಹಿತಿಯನ್ನು ಜನರಿಗೆ ತಲುಪಿಸಿದಾಗ ಮಾತ್ರ ಪತ್ರಿಕೋದ್ಯಮ ಉಳಿಯಲು ಸಾಧ್ಯವೆಂದು ತಿಳಿಸಿದರು.

ಲೇಖಕರಾದ ಶ್ರೀಮತಿ ಕುಸುಮ ಆಯರಹಳ್ಳಿಯವರು, ಜೀವಪರ ಸಮಾನತೆ ಆಧಾರಿತ ದಾರ್ಶನಿಕತೆಯೇ ವಚನ ಸಂಸ್ಕೃತಿ. ಶರಣರ ವಚನಗಳು ಸಾರ್ವಕಾಲಿಕವಾಗಿವೆ. ಸರ್ವಸಮತ್ವದ ನೈತಿಕ ಮೌಲ್ಯಗಳ ಗಣಿಯಾಗಿವೆ. ಆಲೋಚನೆ ಮತ್ತು ಆಚರಣೆಗಳನ್ನು ಒಂದಾಗಿಸುವುದೇ ಶರಣರ ಚಿಂತನೆಗಳಾಗಿವೆ. ಕಾಯಕ ಮತ್ತು ವ್ಯಕ್ತಿ ಸ್ವಾತಂತ್ರ್ಯ ವಚನ ಸಂಸ್ಕೃತಿಯ ಜೀವಾಳವಾಗಿದೆ ಎಂದು ತಿಳಿಸಿದರು.

ಶ್ರೀ ಬೇಲೂರು ರಾಮಮೂರ್ತಿಯವರು, ನಗು ಮನುಷ್ಯನ ನೆಮ್ಮದಿಯ ಬದುಕಿಗೆ ದಿವ್ಯೌಷಧಿಯಾಗಿದೆ. ಯಾಂತ್ರಿಕ ಯುಗದಲ್ಲಿ ಒತ್ತಡಕ್ಕೆ ಒಳಗಾಗುತ್ತಿರುವ ಜನರು ಬದುಕಿನಲ್ಲಿ ಉತ್ಸಾಹವನ್ನು ಕಳೆದುಕೊಳ್ಳಬಾರದು. ನಗು ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸುಧಾರಿಸಲು ಸಹಕಾರಿಯಾಗುತ್ತದೆ. ಹಾಸ್ಯದ ಹಿಂದೆ ಮಾನವೀಯ ಮೌಲ್ಯಗಳು ಹಾಗೂ ಜೀವನ ಪ್ರೀತಿ ಇರುತ್ತದೆ. ಜೀವನದಲ್ಲಿ ಹಾಸ್ಯ ಪ್ರಜ್ಞೆಯಿದ್ದರೆ ಜೀವನೋತ್ಸಾಹ ಸಾಧ್ಯ ಎಂದು ತಿಳಿಸಿದರು.

## ಸುಖ–ದುಃಖಗಳನ್ನು ಸಮಾನವಾಗಿ ಸ್ವೀಕರಿಸಬೇಕು




ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದ ಸಮಾರೋಪದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ದಯಪಾಲಿಸುತ್ತಿರುವುದು. ಹರವೆ ಶ್ರೀಗಳು, ಡಾ. ಪಿ. ಮಣಿ, ಶ್ರೀಮತಿ ಜಯಲಲಿತಾ, ಶ್ರೀ ರವೀಂದ್ರ ಭಟ್, ಶ್ರೀ ಎಸ್. ಪ್ರಕಾಶಂ, ಶ್ರೀ ವೆಂಕಟರೆಡ್ಡಿ ಡಿ. ಪಾಟೀಲ್ ಹಾಗೂ ಶ್ರೀಮತಿ ವೀಣಾ ವಿಜಯಾನಂದ ಕಾಶಪ್ಪನವರ್‌ರವರುಗಳಿದ್ದಾರೆ. (11 ಮೇ 2026)

ಜೀವನದಲ್ಲಿ ಬರುವ ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಹೃದಯವಂತಿಕೆಯನ್ನು ಹೊಂದಿದಾಗ ಮಾತ್ರ ಮನುಷ್ಯ ಪರಿಪೂರ್ಣನಾಗಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಊಟಿಯ ತೀಟಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲಾ ಆವರಣದಲ್ಲಿ ದಿನಾಂಕ 11.5.2026ರಂದು ಸಾರ್ವಜನಿಕರ ಜೀವನೋತ್ಸಾಹ ಶಿಬಿರದ ಸಮಾರೋಪ ಹಾಗೂ ಕೃತಿ ಬಿಡುಗಡೆ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದರು. ಬೇರೆಯವರ ಖುಷಿಯನ್ನು ಕಂಡು ಸಂತೋಷಪಡುವ ಗುಣವನ್ನು ಬೆಳೆಸಿಕೊಳ್ಳಬೇಕು. ಇತರರ ಮನಸ್ಸುಗಳನ್ನು ಅರ್ಥಮಾಡಿಕೊಳ್ಳುವ ಭಾವನೆ ಹೊಂದಿರಬೇಕು. ಕುಟುಂಬದಲ್ಲಿ ಸಾಮರಸ್ಯವಿದ್ದಾಗ ಮಾತ್ರ ನೆಮ್ಮದಿಯ ಬದುಕು ಸಾಧ್ಯ. ಭಗವಂತನ ಅನುಗ್ರಹದಿಂದ ದೊರೆತಿರುವ ಅಮೂಲ್ಯವಾದ ಜೀವನವನ್ನು ಸದುಪಯೋಗ ಪಡಿಸಿಕೊಂಡು ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು ಎಂದು ಹೇಳಿದರು.

ಪ್ರಜಾವಾಣಿ ದಿನಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ರವೀಂದ್ರ ಭಟ್‌ರವರು, ನಿರಂತರವಾಗಿ ಕಾಯಕದಲ್ಲಿ ತೊಡಗಿಕೊಂಡಿದ್ದರೆ ಜೀವನೋತ್ಸಾಹ ಹೆಚ್ಚುತ್ತದೆ. ದುಡಿದು ತಿನ್ನುವ ಪ್ರಜ್ಞೆಯನ್ನು ಪ್ರಕೃತಿ ನಮಗೆ ಯಾವಾಗಲೂ ಕಲಿಸುತ್ತಾ ಬಂದಿದೆ. ನಮ್ಮ ಮನಸ್ಸು ಅರಳಬೇಕಾದರೆ ಸಂವೇದನೆಯನ್ನು ಹೊಂದಿರಬೇಕು. ಕೂಡು ಕುಟುಂಬದ ಅನುಭವವನ್ನು ಪರಿಚಯಿಸುವ ಉದ್ದೇಶದಿಂದ ಪರಮಪೂಜ್ಯ ಜಗದ್ಗುರುಗಳವರು ಇಂತಹ ಶಿಬಿರಗಳನ್ನು ಆಯೋಜಿಸಿದ್ದಾರೆ ಎಂದು ತಿಳಿಸಿದರು.

'ಶರಣರಿನ್ ನೂಟ್ರಿಯೊರು ವಸನಂಗಳ್' ಕೃತಿಯ ಅನುವಾದಕರಾದ ಶ್ರೀಮತಿ ಜಯಲಲಿತಾರವರು ಶರಣರ ವಚನಗಳು ಭಕ್ತಿ ಮಾರ್ಗಕ್ಕೆ ದಾರಿದೀಪವಾಗಿವೆ. ವಚನಗಳು ಮನುಕುಲವಿರುವ ತನಕ ಅನುಸರಿಸಬೇಕಾದ ಶ್ರೇಷ್ಠ ಸಾಹಿತ್ಯವಾಗಿವೆ. ಸುತ್ತೂರು ಶ್ರೀಮಠ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ಸಾಂಸ್ಕೃತಿಕ, ಸಾಹಿತ್ಯಕ ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಚೆನ್ನೈನ ಶ್ರೀ ಬಸವೇಶ್ವರ ಸೋಶಿಯಲ್ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಎಸ್. ಪ್ರಕಾಶಂರವರು "ಶರಣರಿನ್ ನೂಟ್ರಿಯೊರು ವಸನಂಗಳ್' ಕೃತಿ ಬಿಡುಗಡೆಗೊಳಿಸಿ ಕನ್ನಡದಿಂದ ತಮಿಳಿಗೆ ಭಾಷಾಂತರಗೊಂಡಿರುವ ಈ ಕೃತಿ ಅತ್ಯಂತ ಮೌಲಿಕವಾದದ್ದು. ತಮಿಳುನಾಡಿನ ಸಾಹಿತ್ಯಾಸಕ್ತರು ಶರಣರ ವಚನಗಳ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ನೆರವಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕರಾದ ಡಾ. ಪಿ. ಮಣಿಯವರು, ಡಾ. ಪ್ರಭುಶಂಕರ್‌ರವರು ರಚಿಸಿರುವ 'ಶರಣರ 101 ವಚನಗಳು' ಕೃತಿಯುನ್ನು ಅತ್ಯಂತ ಸುಂದರವಾಗಿ ಶ್ರೀಮತಿ ಜಯಲಲಿತಾರವರು ತಮಿಳು ಭಾಷೆಗೆ ಅನುವಾದ ಮಾಡಿದ್ದಾರೆ. ಈ ಪುಸ್ತಕವನ್ನು ತಮಿಳಿಗೆ ಭಾಷಾಂತರ ಮಾಡಿಸಿ ತಮಿಳು ಓದುಗರಿಗೆ ಅನುಕೂಲ ಮಾಡಿಕೊಟ್ಟಿರುವ ಸುತ್ತೂರು ಶ್ರೀಮಠದ ಕಾರ್ಯ ಶ್ಲಾಘನೀಯವಾದುದ್ದು ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ-ಲಿಂಗಾಯುತ ಮಹಾಸಭಾದ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷರಾದ ಶ್ರೀ ವೆಂಕಟರೆಡ್ಡಿ ಡಿ. ಪಾಟೀಲ್‌ರವರು ಸುತ್ತೂರು ಶ್ರೀಮಠದಿಂದ ನಡೆಸಲಾಗುವ ಇಂತಹ ಶಿಬಿರಗಳು ಪ್ರತಿಯೊಬ್ಬರಲ್ಲೂ ಜೀವನೋತ್ಸಾಹವನ್ನು ಮಾತ್ರವಲ್ಲ ಸಂಸ್ಕಾರ ಜೀವನ ನಡೆಸಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ-ಲಿಂಗಾಯುತ ಮಹಾಸಭಾದ ರಾಷ್ಟ್ರೀಯ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ವೀಣಾ ವಿಜಯಾನಂದ ಕಾಶಪ್ಪನವರ್‌ರವರು ಸಂಸ್ಕೃತಿ ಪರಂಪರೆಯನ್ನು ಉಳಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಮಠಗಳ ಸೇವೆಯನ್ನು ನಾವೆಲ್ಲ ಸ್ಮರಿಸಬೇಕು. ಸುತ್ತೂರು ಶ್ರೀಮಠವು ಮಾಡುತ್ತಿರುವ ಸಮಾಜಮುಖಿ ಕಾರ್ಯಗಳು ಪ್ರಸಂಶನೀಯವಾದುದ್ದು. ಗುರು-ಹಿರಿಯರನ್ನು ಗೌರವಿಸುವ ಸಂಸ್ಕಾರವನ್ನು ಮುಂದಿನ ಪೀಳಿಗೆಯವರಿಗೆ ಕೊಂಡೊಯ್ಯುವುದು ಅತಿಮುಖ್ಯ. ಹೆಣ್ಣು ಮಕ್ಕಳು ಸಂಸ್ಕಾರವಂತರಾದರೆ ಮನೆಯ ಸದಸ್ಯರು ಸನ್ಮಾರ್ಗದಿಂದ ನಡೆಯಲು ಸಾಧ್ಯವಾಗುತ್ತದೆಂದು ತಿಳಿಸಿದರು.

ಹರವೆ ಶ್ರೀ ವಿರಕ್ತಮಠದ ಶ್ರೀ ಸರ್ಪಭೂಷಣ ಸ್ವಾಮಿಗಳು ಮಾತನಾಡಿದರು. ಶಿಬಿರಾರ್ಥಿಗಳಾದ ಬೆಂಗಳೂರಿನ ಶ್ರೀ ಜೆ.ಬಿ. ರವಿ, ಬೀದರ್‌ನ ಶ್ರೀಮತಿ ಪ್ರತಿಭಾ ಮಂಚ್, ಬೀರೂರಿನ ಶ್ರೀ ನಿಂಗಪ್ಪ, ಗೋಕಾಕ್‌ನ ಶ್ರೀಮತಿ ಬಬಿತಾ ಪಂಚಣ್ಣನವರ್, ಧಾರವಾಡದ ಶ್ರೀ ಮಲ್ಲಿಕಾರ್ಜುನ ಸಂಗೊಂದಿಮಠ ಹಾಗೂ ಗಂಗಾವತಿಯ ಶ್ರೀಮತಿ ದೊಡ್ಡಬಸಮ್ಮ ಗುರುವಿನಮಠರವರುಗಳು ಅನಿಸಿಕೆಗಳನ್ನು ಹಂಚಿಕೊಂಡರು.

ಶ್ರೀ ಎಂ.ಎಸ್. ಪ್ರಜ್ವಲ್ ಶಿಬಿರದ ವರದಿ ಮಂಡಿಸಿದರು. ಶ್ರೀಮತಿ ಸಹನಾ ಮೋಹನ್ ದೇಸಾಯಿ ಪ್ರಾರ್ಥಿಸಿದರು. ಶ್ರೀ ಹೆಚ್.ಎಸ್. ಸಿದ್ದಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ಶ್ರೀ ಎನ್.ಎಂ. ಶಿವಕುಮಾರ್ ವಂದಿಸಿದರು. ಶ್ರೀ ಸೋಮಶೇಖರ್ ಮಗದುಂ ಕಾರ್ಯಕ್ರಮ ನಿರೂಪಿಸಿದರು.

# ಸಂಸ್ಕಾರಗಳಿದ್ದರೆ ಸಮಸ್ಯೆಗಳಿಗೆ ಸುಲಭ ಪರಿಹಾರ




ಬಿಳಿಗಿರಿರಂಗನಬೆಟ್ಟದ ಜೆಎಸ್‌ಎಸ್ ಆಶ್ರಮದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಜಗದ್ಗುರುಗಳವರು ಆಶೀರ್ವಚನ ನೀಡಿದರು. ಚಿತ್ರದಲ್ಲಿ ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಜಗನ್ನಾಥ ರಾಜು, ಶ್ರೀ ಟಿ. ರಾಮೇಗೌಡ ಹಾಗು ಶ್ರೀ ಸುದರ್ಶನ್ ಚನ್ನಂಗಿಹಳ್ಳಿರವರುಗಳಿದ್ದಾರೆ. (14 ಮೇ 2026)

ಮನುಷ್ಯನು ಜೀವನದಲ್ಲಿ ಉತ್ತಮ ಸಂಸ್ಕಾರಗಳನ್ನು ಹೊಂದಿದ್ದರೆ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಸುಲಭವಾಗಿ ಪರಿಹಾರಗಳನ್ನು ಕಂಡುಕೊಳ್ಳಬಹುದು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ಬಿಳಿಗಿರಿರಂಗನಬೆಟ್ಟದ ಜೆಎಸ್‌ಎಸ್ ಆಶ್ರಮದಲ್ಲಿ ದಿನಾಂಕ 14.5.2026ರಂದು ಸಾರ್ವಜನಿಕರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ವ್ಯಕ್ತಿಯೋರ್ವ ಉತ್ತಮ ಸಂಸ್ಕಾರಗಳನ್ನು ಹೊಂದಿದ್ದರೆ ಸಹವರ್ತಿಗಳು ಅವನ ಪ್ರಭಾವಕ್ಕೆ ಒಳಗಾಗಿ ಬದಲಾವಣೆ ಹೊಂದುತ್ತಾರೆ. ಫಲಾಪೇಕ್ಷೆಯನ್ನು ಹೊಂದದೆ ಕಾಯಕದಲ್ಲಿ ನಿರತರಾಗಬೇಕು. ನಿರೀಕ್ಷೆಯಿಲ್ಲದ ದುಡಿಮೆಯಲ್ಲಿ ಸುಖ, ಸಂತೋಷಗಳಿರುತ್ತವೆ ಎಂದು ಹೇಳಿದರು.

ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿಯವರು, ಮಾನಸಿಕ ಒತ್ತಡಗಳಿಂದ ಹೊರಬರಲು ಇಂತಹ ಶಿಬಿರಗಳು ಸಹಕಾರಿಯಾಗಲಿವೆ. ಪೂರ್ವಜರು ಮೌಲ್ಯಾಧಾರಿತ ಜೀವನನ್ನು ನಡೆಸುತ್ತಿದ್ದರು. ಪ್ರಾಮಾಣಿಕವಾದ ಬದುಕನ್ನು ಸಾಗಿಸುತ್ತಿದ್ದರು. ಅಂಥ ಸಂಸ್ಕಾರಯುತ ಜೀವನ ನಮ್ಮದಾಗಬೇಕು ಎಂದು ತಿಳಿಸಿದರು.

ವಿಜಯ ಕರ್ನಾಟಕ ದಿನಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಸುದರ್ಶನ್ ಚನ್ನಂಗಿಹಳ್ಳಿಯವರು, ಇಂದಿನ ಯುವಜನರು ಯಾವುದೇ ಗುರಿಯಿಲ್ಲದ ಜೀವನ ನಡೆಸುತ್ತಿದ್ದಾರೆ. ವೃಥಾ ಸಲ್ಲದ ಕೆಲಸಗಳಿಗೆ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ. ಹಿರಿಯರು ಯುವಜನರಿಗೆ ಸರಿಯಾದ ಮಾರ್ಗದರ್ಶನ ನೀಡಿ ಸಂಸ್ಕಾರವಂತ ವ್ಯಕ್ತಿಗಳನ್ನಾಗಿ ರೂಪಿಸಬೇಕಿದೆ ಎಂದರು.

ಚಾಮರಾಜನಗರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಎಂ. ಮುತ್ತುರಾಜ್‌ರವರು, ಜೆಎಸ್‌ಎಸ್ ಸಂಸ್ಥೆಯು ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆರೋಗ್ಯ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಮಹತ್ವದ ಕಾರ್ಯವನ್ನು ನಿರ್ವಹಿಸುತ್ತಿದೆ ಎಂದು ಶ್ಲಾಘಿಸಿದರು.

ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಸಂಸ್ಥೆಯ ಕುಲಸಚಿವರಾದ ಶ್ರೀ ಟಿ. ರಾಮೇಗೌಡರು, ಅವಿಭಕ್ತ ಕುಟುಂಬಗಳು ಇಂದು ಕಾಣೆಯಾಗಿವೆ. ಅದರಿಂದ ಮಕ್ಕಳಿಗೆ ಮನೆಗಳಲ್ಲಿ ಸರಿಯಾದ ಸಂಸ್ಕಾರ ದೊರೆಯತ್ತಿಲ್ಲ. ಗುರು ಹಿರಿಯರಿಗೆ ಗೌರವ ನೀಡುವ ಮನೋಭಾವನೆಯನ್ನು ಇಂದಿನ ಪೀಳಿಗೆ ಮರೆಯಬಾರದು ಎಂದು ಹೇಳಿದರು.

ಆಂಧ್ರಪ್ರದೇಶದ ಹಿಂದೂಪುರದ ರೇಷ್ಮೆ ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ನಿವೃತ್ತ ನಿರ್ದೇಶಕರಾದ ಡಾ. ಜಗನ್ನಾಥ ರಾಜುರವರು ಬಿಳಿಗಿರಿರಂಗನಬೆಟ್ಟದಲ್ಲಿ ದೈವಿಕ ಶಕ್ತಿಯಿದೆ. ಸುಂದರವಾದ ಪ್ರಕೃತಿ ಸಂಪತನ್ನು ಹೊಂದಿದೆ. ಇಲ್ಲಿ ಶಿಬಿರ ನಡೆಯುತ್ತಿರುವುದು ಮನಸ್ಸಿಗೆ ಚೈತನ್ಯವನ್ನು ಪಡೆಯಲು ಸಹಕಾರಿಯಾಗುತ್ತವೆ ಎಂದರು.

ನಿಸರ್ಗ ಚಿಕಿತ್ಸಾ ತಜ್ಞರಾದ ಡಾ. ಪೂರ್ವಿ ಜಯರಾಜ್‌ವರು, ಮನುಷ್ಯನು ಸಮಸ್ಯೆ ಹಾಗೂ ಆಂತರಿಕ ಸಮಸ್ಯೆಗಳಿಂದ ಹೊರಬರಲು ಆತನಲ್ಲಿರುವ ಧನಾತ್ಮಕ ನಂಬಿಕೆಯೇ ದಿವ್ಯೌಷಧ. ಶರೀರಕ್ಕೆ ಬರುವ ಕಾಯಿಲೆಗಳಲ್ಲಿ 80ರಷ್ಟು ನಕರಾತ್ಮಕ ಭಾವನೆಯಿಂದಲೇ ಬರುತ್ತವೆ. ನಕರಾತ್ಮಕ ಭಾವನೆಗಳು ಹತ್ತಿರಕ್ಕೆ ಸುಳಿಯದಂತೆ ನೋಡಿಕೊಳ್ಳಲು ಇಂತಹ ಶಿಬಿರಗಳು ಅವಶ್ಯಕ ಎಂದರು.

ಪ್ರಾಣಿಕ್ ಹೀಲಿಂಗ್ ತಜ್ಞರಾದ ಶ್ರೀ ಪಿ.ಆರ್. ರಾಹುಲ್ ಶ್ರೀವತ್ಸರವರು ಭೌತಿಕ ದೇಹದೊಳಗಿರುವ ಚೇತನವೇ ಆತ್ಮ. ವ್ಯಕ್ತಿಯ ಪ್ರಾಣಶಕ್ತಿಗೆ ಎಲ್ಲಾ ಪ್ರದೇಶದ ಪರಿಸರದ ಪ್ರಾಣಶಕ್ತಿ ಹೊಂದಿಕೆಯಾಗುವುದಿಲ್ಲ. ಹೊಂದಾಣಿಕೆ ಆಗದ ಸ್ಥಳದಲ್ಲಿ ಮನಸ್ಸು ಇರಲು ಇಚ್ಛಿಸುವುದಿಲ್ಲ. ಮನುಷ್ಯ ತಾನು ಮಾಡಿದ್ದನ್ನೇ ಮರಳಿ ಪಡೆಯುತ್ತಾನೆ. ಹಾಗಾಗಿ ಒಳಿತನ್ನೆ ಮಾಡುವುದನ್ನು ಕಲಿಯಬೇಕು ಎಂದರು.

ಶ್ರೀಮತಿ ವಿದ್ಯಾ ಮಗದುಂ ಪ್ರಾರ್ಥಿಸಿದರು. ಶ್ರೀ ಎಸ್. ಪುಟ್ಟರಾಜು ಸ್ವಾಗತಿಸಿದರು. ಶ್ರೀ ಉಮೇಶ್ ವಂದಿಸಿದರು. ಶ್ರೀ ಎಚ್.ಎಂ. ನಾಗಭೂಷಣ ಕಾರ್ಯಕ್ರಮವು ನಿರೂಪಿಸಿದರು.

☐

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ
ಚಂದ್ರ ಕುಂದೆ ಕುಂದುವುದಯ್ಯಾ
ಚಂದ್ರಂಗೆ ರಾಹು ಅಡ್ಡ ಬಂದಲ್ಲಿ
ಅಂಬುಧಿ ಬೊಬ್ಬಿಟ್ಟಿತ್ತೆ ಅಯ್ಯಾ
ಅಂಬುಧಿಯ ಮುನಿ ಆಪೋಶನವ ಕೊಂಬಲ್ಲಿ
ಚಂದ್ರಮನಡ್ಡ ಬಂದನೆ ಅಯ್ಯಾ ?
ಆರಿಗಾರೂ ಇಲ್ಲ ಕೆಟ್ಟವಂಗೆ ಕೆಳೆಯಿಲ್ಲ
ಜಗದ ನಂಟ ನೀನೆ ಅಯ್ಯಾ
ಕೂಡಲಸಂಗಮದೇವಯ್ಯಾ!

**ಬಸವಣ್ಣ**

## ಸ್ಥಿತಪ್ರಜ್ಞತೆ ಅಗತ್ಯ



ಬಿಳಿಗಿರಿರಂಗನ ಬೆಟ್ಟದ ಜೆಎಸ್‌ಎಸ್ ಆಶ್ರಮದಲ್ಲಿ ನಡೆದ ಜೀವನೋತ್ಸಾಹ ಶಿಬಿರದಲ್ಲಿ ಶ್ರೀ ಕೆ. ಸುಚೇಂದ್ರ ಪ್ರಸಾದ್, ಶ್ರೀ ವೀರೇಶ್ ಜಿ. ಪಾಟೀಲ್ ಹಾಗೂ ಶ್ರೀ ಚಂದ್ರಶೇಖರ್‌ರವರುಗಳು ಉಪನ್ಯಾಸ ನೀಡಿದರು. (15 ಮೇ 2026)

ಯಾವುದೇ ಸಂದರ್ಭದಲ್ಲಿಯೂ ಮನಸ್ಸು ಚಂಚಲವಾಗದಂತೆ ಸಮಸ್ಥಿತಿಯಲ್ಲಿ ಹಿಡಿತದಲ್ಲಿಟ್ಟುಕೊಳ್ಳುವುದೇ ಸ್ಥಿತಪ್ರಜ್ಞನ ಲಕ್ಷಣ ಎಂದು ಹಿರಿಯ ಕಲಾವಿದರಾದ ಶ್ರೀ ಕೆ. ಸುಚೇಂದ್ರ ಪ್ರಸಾದ್‌ರವರು ಹೇಳಿದರು.

ಬಿಳಿಗಿರಿರಂಗನ ಬೆಟ್ಟದ ಜೆಎಸ್‌ಎಸ್ ಆಶ್ರಮದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ ದಿನಾಂಕ 15.5.20205 ರಂದು 'ಸ್ಥಿತಪ್ರಜ್ಞತೆ' ವಿಷಯ ಕುರಿತು ಉಪನ್ಯಾಸ ನೀಡಿದರು. ಮಾಡುವ ಯಾವುದೇ ಕೆಲಸಕ್ಕೂ ಫಲಾಪೇಕ್ಷೆ ಇಟ್ಟುಕೊಳ್ಳಬಾರದು. ಮನಸ್ಸಿನಲ್ಲಿ ಯಾವುದೇ ರಾಗ ದ್ವೇಷವನ್ನು ಹೊಂದಿರಬಾರದು. ಎಲ್ಲರನ್ನು ಅಪ್ಪಿಕೊಳ್ಳುವ ಮತ್ತು ಒಪ್ಪಿಕೊಳ್ಳುವ ಮನೋಭಾವ ಅವಶ್ಯಕ. ಸಾಮಾನ್ಯರಲ್ಲಿರುವ ಅಸಾಮಾನ್ಯ ಗುಣಗಳನ್ನು ರೂಢಿಸಿಕೊಳ್ಳುವುದರ ಮೂಲಕ ಸ್ಥಿತಪ್ರಜ್ಞರಾಗಿರಬಹುದು ಎಂದು ತಿಳಿಸಿದರು.

ಉಪನ್ಯಾಸಕರಾದ ಶ್ರೀ ವೀರೇಶ್ ಜಿ. ಪಾಟೀಲ್‌ರವರು ಭಾರತದ ಪೂರ್ವಜರ ಆಚಾರ, ವಿಚಾರ, ಆಲೋಚನೆ ಹಾಗೂ ಕಲ್ಪನೆಗಳ ಒಟ್ಟು ಸಂಗ್ರಹವೇ ಭಾರತೀಯ ಸಂಸ್ಕೃತಿ. ಭಾರತೀಯರು ನಡೆನುಡಿಗಳಲ್ಲಿ ಮೂಲ ನೆಲೆಯ ಆಚರಣೆಗಳನ್ನು ಮರೆಯಬಾರದು. ಹಬ್ಬ, ಉತ್ಸವಗಳಲ್ಲಿ ಭಾಗಿಗಳಾಗಿ ಸಂತೋಷದಿಂದ ಆಚರಿಸಬೇಕು. ಜ್ಞಾನ ಮತ್ತು ಜ್ಞಾನಿಗಳಲ್ಲಿ ಯಾವುದೇ ಭೇದ ಭಾವಗಳನ್ನು ಕಾಣಬಾರದು. ಇಂತಹ ದೃಷ್ಟಿಕೋನದಿಂದ ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಉರಗ ತಜ್ಞರಾದ ಶ್ರೀ ಚಂದ್ರಶೇಖರ್‌ರವರು, ಸುತ್ತಮುತ್ತ ಕಾಣುವ ಜೀವಜಗತ್ತು ವೈವಿಧ್ಯತೆಯಿಂದ ಕೂಡಿದೆ. ಸಸ್ಯ ಮತ್ತು ಪ್ರಾಣಿ ವರ್ಗಗಳಲ್ಲಿ ಲಕ್ಷಾಂತರ ವಿಭಿನ್ನ ಪ್ರಭೇದಗಳನ್ನು ಕಾಣಬಹುದು. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಹಾವಿನ ಬಗ್ಗೆ ಧಾರ್ಮಿಕ

ಭಾವನೆಯನ್ನು ಹೊಂದಲಾಗಿದೆ. ಇಲಿಗಳಿಂದ ಹರಡುವ ರೋಗಗಳು ಮತ್ತು ಬೆಳೆ ಹಾನಿಯನ್ನು ತಪ್ಪಿಸಲು ಹಾವುಗಳನ್ನು ಸಂರಕ್ಷಿಸಬೇಕು. ಮಾನವನಿಗೆ ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧವಿದೆ. ಪ್ರಕೃತಿ ಮನುಷ್ಯನಿಗೆ ಉಪಯುಕ್ತವಾದ ಹಲವಾರು ವಸ್ತುಗಳನ್ನು ನೀಡಿದೆ. ಆದ್ದರಿಂದ ಪ್ರಕೃತಿಯನ್ನು ಕಾಪಾಡುವುದು ಮಾನವನ ಆದ್ಯ ಕರ್ತವ್ಯವೆಂದು ತಿಳಿಸಿದರು.

## ಓದುವಿಕೆ ಮತ್ತು ಕೇಳುವಿಕೆಯಿಂದ ಮನಃಪರಿವರ್ತನೆ ಸಾಧ್ಯ




ಬಿಳಿಗಿರಿರಂಗನಬೆಟ್ಟದ ಜೆಎಸ್‌ಎಸ್ ಆಶ್ರಮದಲ್ಲಿ ಸಾರ್ವಜನಿಕರಿಗಾಗಿ ನಡೆದ ಜೀವನೋತ್ಸಾಹ ಶಿಬಿರದಲ್ಲಿ ನಿಡಸೋಸಿ ಜಗದ್ಗುರು ಶ್ರೀ ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಗಳು ಶುಭ ಸಂದೇಶ ನೀಡುತ್ತಿರುವುದು. ಉಪ್ಪಿನ ಬೆಟಗೇರಿ ಶ್ರೀಗಳು ಹಾಗೂ ಶಿಬಿರಾರ್ಥಿಗಳಿದ್ದಾರೆ. (16 ಮೇ 2026)

ಉತ್ತಮ ಓದುವಿಕೆ ಮತ್ತು ಕೇಳುವಿಕೆಯಿಂದ ಮನಸ್ಸು ಪರಿವರ್ತನೆಗೊಳ್ಳುತ್ತದೆ ಎಂದು ನಿಡಸೋಸಿ ಜಗದ್ಗುರು ಶ್ರೀ ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಗಳು ಹೇಳಿದರು.

ಬಿಳಿಗಿರಿರಂಗನಬೆಟ್ಟದ ಜೆಎಸ್‌ಎಸ್ ಆಶ್ರಮದ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ 16.5.2026ರಂದು ಅವರು ಶುಭಸಂದೇಶ ನೀಡಿದರು. ಇಂದು ಮನಸ್ಸು ಸಮಾಧಾನವನ್ನು ಕಳೆದುಕೊಳ್ಳುತ್ತಿದೆ. ಧ್ಯಾನದಿಂದ ಮನಸ್ಸು ಹಿಡಿತಕ್ಕೆ ಬರುತ್ತದೆ. ಮನ, ಚಿತ್ತ, ಬುದ್ಧಿ ಮತ್ತು ಅಹಂಕಾರ ಈ ನಾಲ್ಕು ಅಂಶಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬೇಕು. ಇವು ನಮ್ಮ ಆಲೋಚನೆಗಳು, ನಿರ್ಧಾರಗಳು ಮತ್ತು ಇಂದ್ರಿಯಗಳನ್ನು ನಿಯಂತ್ರಿಸುತ್ತವೆ. ಹಿಂದೆ ಜೀವನದಲ್ಲಿ ಸಾಕಷ್ಟು ಉತ್ಸಾಹ ಇರುತ್ತಿತ್ತು, ಇಂದು ಎಲ್ಲವೂ ಹಣದ

ಮೇಲೆ ನಿಂತಿದೆ. ನಮ್ಮ ಸುತ್ತಲಿನ ಪರಿಸರದಲ್ಲಿಯೇ ಸಾಕಷ್ಟು ಜೀವನೋತ್ಸಾಹದ ಅಂಶಗಳಿವೆ. ಅವುಗಳನ್ನು ಗುರುತಿಸಿ ರೂಢಿಸಿಕೊಳ್ಳಬೇಕು. ಎಲ್ಲರೊಂದಿಗೂ ಉತ್ತಮವಾದ ಬಾಂಧವ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಉಪ್ಪಿನ ಬೆಟಗೇರಿಯ ಶ್ರೀ ಕುಮಾರ ವಿರೂಪಾಕ್ಷ ಸ್ವಾಮಿಗಳು, ಜೀವನ ಎಂಬುದೇ ಒಂದು ಉತ್ಸವವಿದ್ದಂತೆ. ಅದನ್ನು ಸಂತೋಷದಿಂದ ನಡೆಸಿಕೊಂಡು ಸಾರ್ಥಕತೆಯನ್ನು ಪಡೆದುಕೊಳ್ಳಬೇಕು. ಜೀವನ ಸುಖ ದುಃಖಗಳ ಮಿಶ್ರಣ. ಕಷ್ಟಗಳು ಹೆಚ್ಚಾದಾಗ ಉತ್ಸಾಹ ಕಳೆದುಕೊಳ್ಳದೆ, ಪ್ರತಿಕ್ಷಣಗಳನ್ನು ಉತ್ಸಾಹದಿಂದ ಅನುಭವಿಸಬೇಕು ಎಂದು ತಿಳಿಸಿದರು.

ವಿದುಷಿ ಮತ್ತು ವಾಗ್ಮಿಗಳಾದ ಡಾ. ಅಮೃತವರ್ಷಿಣಿ ಉಮೇಶರವರು, ವೇದಗಳು ಜೀವನ ಮಾರ್ಗದರ್ಶನದ ಕೈಪಿಡಿಗಳು. ವೇದಗಳು ಮಾನವೀಯತೆಯ ಆಧಾರದ ಮೇಲೆ ನಿಂತಿವೆ. ವೇದಗಳ ಹಿನ್ನೆಲೆಯಲ್ಲಿ ಮನುಷ್ಯನ ಜೀವನವನ್ನು ಅವಲೋಕಿಸಿದಾಗ ಅನೇಕ ವಿಚಾರಗಳು ಗೋಚರಿಸುತ್ತವೆ. ವೇದಗಳ ತತ್ತ್ವಗಳ ಹಿನ್ನೆಲೆಯಲ್ಲಿ ಉತ್ತಮ ಶಾಂತಿಯುತ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ. ವೇದಗಳು ಮಾನವನ ಜೀವನೋತ್ಸಾಹಕ್ಕೆ ದಾರಿದೀಪಗಳಾಗಿವೆ ಎಂದು ತಿಳಿಸಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶ್ರೀ ಕಜಂಪಾಡಿ ಸುಬ್ರಹ್ಮಣ್ಯ ಭಟ್‌ರವರು, ಮನೆಯೇ ಮೊದಲ ದೇವಾಲಯ ಹಾಗೂ ವಿದ್ಯಾಲಯ. ಅದು ಅತಿಥಿಗಳಿಗೆ ಆದರಾಲಯವಾದರೆ ನೆಮ್ಮದಿ ಮತ್ತು ಆರೋಗ್ಯ ಸಿಗುತ್ತವೆ. ಕುಟುಂಬದಲ್ಲಿ ಎಲ್ಲರೂ ಸೇರಿ ಮಾಡುವ ಭಜನೆಯಿಂದ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ. ಸಹಭೋಜನದಿಂದ ರುಚಿ ಹೆಚ್ಚುತ್ತದೆ. ನಮ್ಮ ನಾಡಿನ ಭಾಷೆ ಮತ್ತು ಭೂಷಣಗಳು ಜೀವನಕ್ಕೆ ಬೇರುಗಳಾಗಿವೆ. ಉತ್ತಮವಾದ ಭಾವನೆಗಳನ್ನು ಹೊಂದಿದ್ದರೆ ಜೀವನ ಸಮತೋಲನವಾಗಿರುತ್ತದೆ ಎಂದು ತಿಳಿಸಿದರು.

ಸಿಸಿಬಿ ಡಿವೈಎಸ್‌ಪಿಯುವರಾದ ಶ್ರೀ ಎಚ್.ಕೆ. ಮಹಾನಂದರವರು, ಸೈಬರ್ ಅಪರಾಧಗಳು ಇಂದು ಎಲ್ಲಾ ಕ್ಷೇತ್ರಗಳಲ್ಲೂ ನಡೆಯುತ್ತಿವೆ. ನಮಗೆ ತಂತ್ರಜ್ಞಾನ ಸಹಕಾರಿಯಾಗಿದೆ. ಆದರೆ ಅದನ್ನು ಜಾಣ್ಮೆಯಿಂದ ಬಳಸದಿದ್ದರೆ ಅಪಾಯವಿದೆ. ಇಂಟರ್ನೆಟ್ ಬಳಸುವ ಪ್ರತಿಯೊಬ್ಬರು ಸೈಬರ್ ಸುರಕ್ಷತೆ ಬಗ್ಗೆ ತಿಳಿದಿರಬೇಕು ಎಂದು ಹೇಳಿದರು.

ಸಂಜೆ ಶ್ರೀ ಗಂಗಾಧರೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದರು. ಶ್ರೀ ಬಸವರಾಜ ಮತ್ತು ತಂಡದವರು ಗೋರುಖಾನ್ ಸೋಲಿಗರ ನೃತ್ಯ ಪ್ರದರ್ಶನ ನೀಡಿದರು.

□

## ಕಾನೂನು ಅರಿವು ಎಲ್ಲರಿಗೂ ಅವಶ್ಯಕ

ಪ್ರತಿಯೊಬ್ಬರು ಕಾನೂನಿನ ಅರಿವು ಹೊಂದುವುದು ಅತಿ ಮುಖ್ಯವಾದುದೆಂದು ನಂಜನಗೂಡು ಜೆಎಂಎಫ್‌ಸಿ ನ್ಯಾಯಾಲಯದ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಶ್ರೀ ಕೆ.ಜಿ. ಸುರೇಶ್‌ರವರು ಹೇಳಿದರು.

ಬಿಳಿಗಿರಿರಂಗನಬೆಟ್ಟದ ಜೆಎಸ್‌ಎಸ್ ಆಶ್ರಮದ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದಲ್ಲಿ 17.5.2026ರಂದು ಅವರು ಉಪನ್ಯಾಸ ನೀಡಿದರು. ಕಾನೂನಿನ ಮುಂದೆ ಎಲ್ಲರೂ




ಬಿಳಿಗಿರಿರಂಗನಬೆಟ್ಟದ ಜೆಎಸ್‌ಎಸ್ ಆಶ್ರಮದಲ್ಲಿ ಜೀವನೋತ್ಸಾಹ ನಡೆದ ಶಿಬಿರದಲ್ಲಿ ಶ್ರೀ ಕೆ.ಜಿ. ಸುರೇಶ್, ಶ್ರೀ ಮೈಸೂರು ಆನಂದ್ ಹಾಗೂ ಶ್ರೀಮತಿ ಬಿ.ಎಸ್. ಉಮಾ ಪ್ರಕಾಶ್‌ರವರುಗಳು ಉಪನ್ಯಾಸ ನೀಡಿದರು. (17 ಮೇ 2026)

ಸಮಾನರು. ಹಕ್ಕು, ಕರ್ತವ್ಯ ಹಾಗೂ ದೇಶದ ಕಾನೂನಿನ ಬಗ್ಗೆ ತಿಳಿದಿರಬೇಕು. ಕಾನೂನಿನಲ್ಲಿರುವ ಅನೇಕ ನೈತಿಕ, ಮೌಲ್ಯಯುತ ಅಂಶಗಳನ್ನು 12ನೇ ಶತಮಾನದಲ್ಲಿಯೇ ಬಸವಾದಿ ಶರಣರು ತಮ್ಮ ವಚನಗಳಲ್ಲಿ ತಿಳಿಸಿದ್ದಾರೆಂದು ಹೇಳಿದರು.

ಹಾಸ್ಯ ಕಲಾವಿದರಾದ ಶ್ರೀ ಮೈಸೂರು ಆನಂದ್‌ರವರು, ಮನಸ್ಸಿನ ಒತ್ತಡ ಮತ್ತು ಚಿಂತೆಗಳಿಂದ ದೂರವಿದ್ದರೆ ಜೀವನವು ಸಂತೋಷವಾಗಿರುತ್ತದೆ. ಜೀವನದ ಕಷ್ಟಗಳನ್ನು ನಗುತ್ತಲೇ ಎದುರಿಸಬೇಕು. ನಗು ಇರುವ ಮನೆ ಮತ್ತು ಕುಟುಂಬ ಸದಾ ಸಂತೋಷದಿಂದ ಕೂಡಿರುತ್ತದೆ. ದೇಹಕ್ಕೆ ವಯಸ್ಸಾಗುತ್ತದೆಯೇ ಹೊರತು ಮನಸ್ಸಿಗಲ್ಲ. ಜೀವನದಲ್ಲಿ ಎಲ್ಲ ಕಡೆಯೂ ಹಾಸ್ಯವಿದೆ. ಅದನ್ನು ಗುರುತಿಸಿ ಅನುಭವಿಸಬೇಕು. ನಗುವಿನಿಂದ 'ಎಂಡಾರ್ಫಿನ್' ಎಂಬ ಹಾರ್ಮೋನ್ ದೇಹದಲ್ಲಿ ಬಿಡುಗೊಂಡು ಒತ್ತಡ ಕಡಿಮೆಯಾಗುತ್ತದೆ. ನಗು ನೈಸರ್ಗಿಕವಾಗಿಯೇ ನೋವು ನಿವಾರಕವಾಗಿದೆ. ಅದರಿಂದ ರೋಗ ನಿರೋಧಕ ಶಕ್ತಿಯು ಹೆಚ್ಚುತ್ತದೆ. ನಗು ಮನಸ್ಸು ಮತ್ತು ದೇಹಕ್ಕೆ ಒಂದು ದಿವ್ಯೌಷಧವಾಗಿದೆ ಎಂದು ಹೇಳಿದರು.

ಆರೋಗ್ಯ ಸಲಹೆಗಾರರಾದ ಶ್ರೀಮತಿ ಬಿ.ಎಸ್. ಉಮಾ ಪ್ರಕಾಶ್‌ರವರು, ಪ್ರಾಚೀನ ಕಾಲದಲ್ಲಿ ಧಾನ್ಯ ತರಕಾರಿಗಳನ್ನು ಬೆಳೆಯುವ ವಿಧಾನ ಆರೋಗ್ಯಕರವಾಗಿತ್ತು. ಆಹಾರ ಪದಾರ್ಥಗಳು ಹೆಚ್ಚು ಪೌಷ್ಟಿಕಾಂಶವನ್ನು ಹೊಂದಿರುತ್ತಿದ್ದವು. ಇಂದು ಅದರ ಕೊರತೆ ಕಾಣುತ್ತಿದೆ. ಇದರಿಂದ ದೇಹದಲ್ಲಿ ಅನೇಕ ಸಮಸ್ಯೆಗಳು ಉಂಟಾಗುತ್ತಿವೆ. ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತಿದೆ. ಉತ್ತಮ ಆರೋಗ್ಯಕ್ಕೆ ಸಮತೋಲನ ಆಹಾರ ಅತಿಮುಖ್ಯ. ಉತ್ತಮ ಆಹಾರ ಪದ್ಧತಿಯಿಂದ ಅನೇಕ ರೋಗಗಳನ್ನು ತಡೆಯಬಹುದು. ಸಿರಿಧಾನ್ಯಗಳು ಹಾಗೂ ಸಾವಯವ ಪದಾರ್ಥಗಳ ಉಪಯೋಗದಿಂದ ಉತ್ತಮ ಆರೋಗ್ಯ ಹೊಂದಲು ಸಾಧ್ಯವೆಂದು ತಿಳಿಸಿದರು.

ಅಧ್ಯಯನ ಶಿಬಿರ

## ಸನ್ಮಾರ್ಗದಲ್ಲಿ ಸಾಗಲು ಸಾಧುಸಂತರ ಮಾರ್ಗದರ್ಶನ ಅವಶ್ಯಕ




ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಅಧ್ಯಯನ ಶಿಬಿರವನ್ನು ಶ್ರೀ ಡಿ.ಆರ್. ಪಾಟೀಲ್‌ರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಶ್ರೀ ವಿ.ಆರ್. ಸುದರ್ಶನ್, ಶ್ರೀ ಮಲ್ಲಯ್ಯ ಸ್ವಾಮಿಗಳು, ಡಾ. ಐ.ಜಿ. ಸನದಿ, ಪ್ರೊ. ಕೆ. ಅನಂತರಾಮು, ಸಂಚಾಲಕರುಗಳು ಹಾಗೂ ಶಿಬಿರಾರ್ಥಿಗಳಿದ್ದಾರೆ. (21 ಮೇ 2026)

ಸಮಾಜ ಸನ್ಮಾರ್ಗದಲ್ಲಿ ಸಾಗಲು ಸಾಧು ಸಂತರು ಹಾಗೂ ಮಹಾತ್ಮರ ಮಾರ್ಗದರ್ಶನ ಅವಶ್ಯಕ ಎಂದು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಶ್ರೀ ಡಿ.ಆರ್. ಪಾಟೀಲ್‌ರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ನಿಜಗುಣ ಶಿವಯೋಗಿಗಳ ವಿವೇಕಚಿಂತಾಮಣಿ ಕೃತಿಯ ಕುರಿತು ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಏರ್ಪಡಿಸಿರುವ ಅಧ್ಯಯನ ಶಿಬಿರವನ್ನು ದಿನಾಂಕ 21.5.2026 ರಂದು ಉದ್ಘಾಟಿಸಿ ಅವರು ಮಾತನಾಡಿದರು. ಭಾರತೀಯ ಪರಂಪರೆಯಲ್ಲಿ ಸತ್ಪುರುಷರುಗಳಿಗೆ ವಿಶೇಷ ಸ್ಥಾನವಿದೆ. ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಕಾರ್ಯವನ್ನು ಸಾಧು ಸಂತರು ಮಾಡುತ್ತಿರುತ್ತಾರೆ. ಈ ಶಿಬಿರವು ನಮ್ಮೆಲ್ಲರಿಗೂ ಒಂದು ವರ್ಷಕ್ಕೆ ಆಗುವ ಜ್ಞಾನ ಶಕ್ತಿಯನ್ನು ನೀಡುತ್ತದೆ. ಇದನ್ನು ಆಯೋಜನೆ ಮಾಡಿರುವ ಪರಮಪೂಜ್ಯ ಜಗದ್ಗುರುಗಳ ಕಾರ್ಯ ಸದಾ ಸ್ಮರಣೀಯವಾದುದು ಎಂದು ತಿಳಿಸಿದರು.

ಮಾಜಿ ಸಭಾಪತಿಗಳಾದ ಶ್ರೀ ವಿ.ಆರ್. ಸುದರ್ಶನ್‌ರವರು, ಮಾನವೀಯ ಮೌಲ್ಯಗಳಿಂದ ಕೂಡಿರುವ ಸಮಾಜವನ್ನು ನಿರ್ಮಾಣ ಮಾಡಬೇಕು. ಭಾರತೀಯ ಪರಂಪರೆಗೆ ಅತ್ಯುತ್ತಮ ಹಿನ್ನೆಲೆಯಿದೆ. ವಿಜ್ಞಾನ ಮತ್ತು ತತ್ವಜ್ಞಾನವನ್ನು

ಸಮನ್ವಯಗೊಳಿಸಿಕೊಳ್ಳಬೇಕು. ಶ್ರೀಮಠದ ದಾಸೋಹ ಸೇವೆಯು ಸರ್ವದಿಕ್ಕುಗಳಲ್ಲಿ ಪಸರಿಸಿದೆ. ಅನ್ನ, ಆರೋಗ್ಯ, ಸಂಸ್ಕೃತಿ, ಅಧ್ಯಾತ್ಮಿಕತೆ, ವಿದ್ಯೆ, ಜ್ಞಾನ ಹಾಗೂ ಜನ ಜಾಗೃತಿ ಇವೇ ಮೊದಲಾದ ಸಾಮಾಜಿಕ, ಧಾರ್ಮಿಕ ಸೇವೆಯನ್ನು ಇಡೀ ನಾಡಿಗೆ ನೀಡುತ್ತಿದೆ. ವಿವೇಕಚಿಂತಾಮಣಿ ಗ್ರಂಥವು ವಿಶ್ವಕೋಶವಾಗಿದೆ ಎಂದು ತಿಳಿಸಿದರು.

ಮಾಜಿ ಸಂಸದರಾದ ಡಾ. ಐ.ಜಿ. ಸನದಿಯವರು ವ್ಯಕ್ತಿಯ ಸಾಮರ್ಥ್ಯವನ್ನು ಸಮಾಜದ ಒಳಿತಿಗಾಗಿ ಬಳಸಬೇಕು. ಸಾರ್ವಜನಿಕ ಜೀವನದಲ್ಲಿ ಪರಿಶುದ್ಧರಾಗಿರಬೇಕು. ಜೀವನ ಸಂಗ್ರಾಮದಲ್ಲಿ ಗೆಲ್ಲಬೇಕಾದರೆ ನಿರ್ಮೋಹಿಗಳಾಗಿರಬೇಕು. ನಿಜಗುಣ ಶಿವಯೋಗಿಗಳು ಮಹಾನ್ ಜ್ಞಾನಿಯಾಗಿದ್ದರು, ಅವರು ಕಾವ್ಯದ ತೆರೆಯ ಮೇಲೆ ನಿಂತು ಆಧ್ಯಾತ್ಮಿಕ ಮುಗಿಲನ್ನು ಮುಟ್ಟಿದವರು ಎಂದು ಹೇಳಿದರು.

ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು, ಭಾರತೀಯ ಸಂಸ್ಕೃತಿಯು ಋಷಿಮುನಿಗಳಿಂದ ಬೆಳೆದ ಸಂಸ್ಕೃತಿಯಾಗಿದೆ. ಈ ಶಿಬಿರವು ಆಧ್ಯಾತ್ಮಿಕ ಸಂಪತ್ತನ್ನು ನೀಡುತ್ತದೆ. ನಿಜಗುಣ ಶಿವಯೋಗಿಗಳು ಕವಿಗಳು, ವಿದ್ವಾಂಸರು, ವೇದಶಾಸ್ತ್ರ ಪಂಡಿತರು ಹಾಗೂ ಬ್ರಹ್ಮಜ್ಞಾನಿಗಳಾಗಿದ್ದರು. ಇವರ ವಿವೇಕ ಚಿಂತಾಮಣಿಯು ಮೇರು ಆಧ್ಯಾತ್ಮಿಕ ಗ್ರಂಥವಾಗಿದೆ. ಜ್ಞಾನ ವಿಷಯದಲ್ಲಿ ಜ್ಞಾನರತ್ನವೇ ಆಗಿದೆ. ವೇದ, ಶಾಸ್ತ್ರ, ಪುರುಷಾರ್ಥ ಹಾಗೂ ಇತಿಹಾಸ ಹಿಂದೂಧರ್ಮದ ಆಧಾರ ಸ್ಥಂಭಗಳಾಗಿದ್ದು, ಇವುಗಳನ್ನು ಈ ಗ್ರಂಥದಲ್ಲಿ ಕಾಣಬಹುದಾಗಿದೆ ಎಂದರು. ಮೊದಲನೇ ಪರಿಚ್ಛೇದದ ವೇದಾಂಗಗಳು, ಉಪವೇಯಗಳು, ಉಪನಿಷತ್ತು, ಷಟ್‌ದರ್ಶನ, ಮೀಮಾಂಸ ಶಾಸ್ತ್ರ, ಜೀವನ್ಮುಕ್ತನ ಕುರಿತು ಸವಿವರವಾಗಿ ಉದಾಹರಣೆಗಳ ಮೂಲಕ ವಿವರಿಸಿದರು.

ಘೊಡಗೇರಿಯ ಶಿವಾನಂದ ಮಠದ ಶ್ರೀ ಮಲ್ಲಯ್ಯ ಸ್ವಾಮಿಗಳು, ಹೂವು ತನ್ನ ಪರಿಮಳವನ್ನು ಜಗತ್ತಿಗೆ ಹರಡುವಂತೆ ನಮ್ಮ ಬದುಕು ಸಮಾಜಕ್ಕೆ ಸಮರ್ಪಣೆಯಾಗಬೇಕು. ವಿವೇಕ ಚಿಂತಾಮಣಿ ಗ್ರಂಥವು ಶ್ರೇಷ್ಠ ಗ್ರಂಥವಾಗಿದ್ದು, ಇದುವರೆಗೆ ಯಾರೂ ಇದರ ಕುರಿತು ವ್ಯಾಖ್ಯಾನ ಗ್ರಂಥವನ್ನು ರಚಿಸಿಲ್ಲ ಎಂದು ತಿಳಿಸಿದರು.

ಚಿಲಕವಾಡಿಯ ಶ್ರೀ ಗುರುರಾಮಯೋಗೀಶ್ವರ ಮಠದ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮಿಗಳು, ಇಂತಹ ಅಧ್ಯಯನ ಶಿಬಿರ ಅವಶ್ಯಕ. ಈ ಶಿಬಿರದ ಸದುಪಯೋಗವನ್ನು ಎಲ್ಲರೂ ಪಡೆಯಬೇಕು. ನಿಜಗುಣ ಶಿವಯೋಗಿಗಳು ಲೋಕ ಕಲ್ಯಾಣಕ್ಕಾಗಿ ಹಲವಾರು ಗ್ರಂಥಗಳನ್ನು ರಚನೆ ಮಾಡಿ ಆಧ್ಯಾತ್ಮಿಕ ಚಿಂತನೆಗಳನ್ನು ನೀಡಿದ್ದಾರೆ ಎಂದು ತಿಳಿಸಿದರು.

ಶ್ರೀಮತಿ ಎಸ್. ಶಾಂತಾ ಪ್ರಾರ್ಥಿಸಿದರು. ಶ್ರೀ ಕೆ.ಪಿ. ಬಸವರಾಜುರವರು ಸ್ವಾಗತಿಸಿದರು. ಶ್ರೀ ಗವಿಯಪ್ಪದೇವರು ವಂದಿಸಿದರು, ಶ್ರೀ ಎಸ್. ನಂದೀಶ್ ಕಾರ್ಯಕ್ರಮ ನಿರೂಪಿಸಿದರು.

ವೇದ ಘನವೆಂಬುದೊಂದು ಸಂಪಾದನೆ
ಶಾಸ್ತ್ರ ಘನವೆಂಬುದೊಂದು ಸಂಪಾದನೆ
ಪುರಾಣ ಘನವೆಂಬುದೊಂದು ಸಂಪಾದನೆ
ಆಗಮ ಘನವೆಂಬುದೊಂದು ಸಂಪಾದನೆ
ಅಹುದೆಂಬುದೊಂದು ಸಂಪಾದನೆ
ಅಲ್ಲವೆಂಬುದೊಂದು ಸಂಪಾದನೆ
ಗುಹೇಶ್ವರನೆಂಬ ಮಹಾಘನದ
ನಿಜಾನುಭಾವಸಂಪಾದನೆಯ ಅರಿಯದ ಕಾರಣ
ಹಲವು ಸಂಪಾದನೆಗಳಾದವು

**ಅಲ್ಲಮಪ್ರಭುದೇವರು**

# ಸದ್ಗುರುವಿನ ಕೃಪೆಯಿಂದ ಆತ್ಮಸಾಕ್ಷಾತ್ಕಾರ



ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ನಿಜಗುಣ ಶಿವಯೋಗಿಗಳವರ 'ವಿವೇಕ ಚಿಂತಾಮಣಿ' ಕೃತಿಯ ಅಧ್ಯಯನ ಶಿಬಿರದಲ್ಲಿ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಹಾಗೂ ಶ್ರೀ ಮಲ್ಲಯ್ಯ ಸ್ವಾಮಿಗಳು ಉಪನ್ಯಾಸ ನೀಡಿದರು. (22 ಮೇ 2026)

ಸದ್ಗುರುವಿನ ಕೃಪೆಯಿಂದ ಆತ್ಮ ಸಾಕ್ಷಾತ್ಕಾರ ಸಾಧ್ಯ ಎಂದು ನಿವೃತ್ತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿ ಕೃತಿಯ ಕುರಿತು ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಏರ್ಪಡಿಸಿರುವ ಅಧ್ಯಯನ ಶಿಬಿರದಲ್ಲಿ ದಿನಾಂಕ 22.5.2026ರಂದು 'ವೇದಾದಿಶಾಸ್ತ್ರಾರ್ಥ ನಿರ್ಣಯ' ವಿಷಯ ಕುರಿತು ಅವರು ಉಪನ್ಯಾಸ ನೀಡಿದರು. ಬಂಧ ಮೋಕ್ಷಗಳ ರಹಸ್ಯವನ್ನು ಗುರುವಿನ ಸಹಾಯದಿಂದ ತಿಳಿಯಬಹುದು. ಮನಸ್ಸಿನ ಏಕಾಗ್ರತೆಯ ಮೂಲಕ ಬ್ರಹ್ಮ ಸ್ಥಿತಿ ಪಡೆಯಬಹುದು. ಭಕ್ತಿ ಮಾರ್ಗದಲ್ಲಿ ನಡೆದು ಆತ್ಮನನ್ನು ಅರಿಯಬೇಕು. ಶರೀರ ನಶ್ವರ, ಆತ್ಮ ಶಾಶ್ವತವಾದುದು. ವಿವೇಕ ಚಿಂತಾಮಣಿಯ ದ್ವಿತೀಯ ಪರಿಚ್ಛೇದದಲ್ಲಿ ಆಗಮಗಳು, ಶೈವ ಸಿದ್ಧಾಂತ ಪ್ರಭೇದಗಳು ಹಾಗೂ ವಿಶೇಷವಾಗಿ ವೀರಶೈವ ಸಿದ್ಧಾಂತ ಕುರಿತು ತಿಳಿಸಲಾಗಿದೆ. ಗುರುವಿನಿಂದ ಲಿಂಗ ದೀಕ್ಷೆ ಪಡೆದು ಶ್ರದ್ಧೆಯಿಂದ ಶಿವಧ್ಯಾನ ಮಾಡಬೇಕು. ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲ ಮೆಟ್ಟಿಲುಗಳನ್ನು ಹಂತ ಹಂತವಾಗಿ ಏರಿ ಕೊನೆಗೆ ಶಿವನಲ್ಲಿ ಐಕ್ಯನಾಗಬಹುದು ಎಂದು ಹೇಳಿದರು.

ಘೋಡಗೇರಿ ಶ್ರೀ ಶಿವಾನಂದ ಮಠದ ಶ್ರೀ ಮಲ್ಲಯ್ಯ ಸ್ವಾಮಿಗಳು, ಭಾರತದ ನೆಲ, ಜಲ, ವಾಯು ಅತ್ಯಂತ ಪವಿತ್ರವಾದುವು. ಭಕ್ತಿ, ಧ್ಯಾನ ಮತ್ತು ವೈರಾಗ್ಯವಿರುವ ಪುಣ್ಯಭೂಮಿ. ವಿವೇಕ ಚಿಂತಾಮಣಿಯ ಮೃತ್ಯುಲೋಕ ಸ್ಥಿತಿ ವರ್ಣನೆಯಲ್ಲಿ ಸಪ್ತ ದ್ವೀಪಗಳು ಹಾಗೂ ಸಪ್ತ ಸಾಗರಗಳ ವರ್ಣನೆಯಿದೆ. ಆತ್ಮ ಜ್ಞಾನಿಯಾದವನಿಗೆ ಭೌಗೋಳಿಕ ಸನ್ನಿವೇಶಗಳ ಬಗ್ಗೆ ಅರಿವು ಇರಬೇಕು. ಪ್ರಕೃತಿಯಲ್ಲಿ ಅಪಾರ ಶಕ್ತಿ ಇದೆ. ಇದು ಜೀವಿಗಳ ಉಳಿವಿಗೆ ಕಾರಣವಾಗಿವೆ ಎಂದು ತಿಳಿಸಿದರು.

ಪ್ರಾಣಿಕ್ ಹೀಲಿಂಗ್ ತಜ್ಞರಾದ ಶ್ರೀ ಪಿ.ಆರ್. ರಾಹುಲ್ ಶ್ರೀವತ್ಸರವರು, ಆತ್ಮವು ಈ ದೇಹಕ್ಕೆ ಚೈತನ್ಯವನ್ನು ನೀಡುತ್ತದೆ. ಮನಸ್ಸು ಮತ್ತು ದೇಹವನ್ನು ಒಂದಾಗಿಸುವುದೇ ಧ್ಯಾನ. ಪ್ರಕೃತಿಯಲ್ಲಿರುವ ಶಕ್ತಿಯನ್ನು ದೇಹದ ಶಕ್ತಿಯೊಂದಿಗೆ ಪರಸ್ಪರ ಸಮ್ಮಿಲನಗೊಳಿಸಬೇಕು. ಆಗ ದೇಹದಲ್ಲಿರುವ ನ್ಯೂನತೆಗಳು ಮತ್ತು ನೋವು ಕಡಿಮೆಯಾಗುತ್ತದೆ ಎಂದು ತಿಳಿಸಿದರು.

ಸಂಜೆ ಕಪಿಲಾ ನದಿ ತೀರದಲ್ಲಿ ಪ್ರಾರ್ಥನೆ ಹಾಗೂ ಕಪಿಲಾರತಿ ಕಾರ್ಯಕ್ರಮವು ಶ್ರದ್ಧಾ ಭಕ್ತಿಗಳಿಂದ ನೆರವೇರಿತು. ಶ್ರೀ ಮಹದೇವ ಪ್ರಸಾದ್‌ರವರು ನದಿಗಳ ಮಹತ್ವಗಳ ಕುರಿತು ಮಾಹಿತಿ ನೀಡಿದರು. ಆಲಮಟ್ಟಿಯ ಶ್ರೀ ರುದ್ರಮುನಿ ಸ್ವಾಮಿಗಳು ನದಿಗಳ ಸಂರಕ್ಷಣೆಯನ್ನು ಮಾಡುವಂತೆ ಎಲ್ಲರಿಗೂ ಭಗವಂತನ ಹೆಸರಿನಲ್ಲಿ ಪ್ರತಿಜ್ಞಾವಿಧಿ ಬೋಧಿಸಿದರು.

## ತನ್ನನ್ನು ತಾನು ಅರಿಯುವುದೇ ಮುಕ್ತಿ

ತನ್ನನ್ನು ತಾನು ಅರಿಯುವುದೇ ಮುಕ್ತಿ ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾ. ಎಂ.ಆರ್. ಜಯರಾಂರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 25.5.2026 ರಂದು ಅಧ್ಯಯನ ಶಿಬಿರದ ಸಮಾರೋಪ ಭಾಷಣ ಮಾಡುತ್ತಾ ಅವರು ತಿಳಿಸಿದರು. ಶಾಸ್ತ್ರ ಗ್ರಂಥಗಳ ಅಧ್ಯಯನದಿಂದ ಅನುಭವ ಮತ್ತು ಅರಿವನ್ನು ಪಡೆಯಬಹುದು. ಯೋಗಿಗಳ ಅನುಗ್ರಹದಿಂದ ಮಾತ್ರ ಮೋಕ್ಷ ಸಾಧ್ಯ. ಇದಕ್ಕೆ ಯೋಗಿಗಳ ಆಶ್ರಯ ಅತಿ ಮುಖ್ಯವಾದುದು. ವ್ಯಕ್ತಿಯು ಯಾವುದೇ ಸ್ವಾರ್ಥವಿಲ್ಲದೆ ಸಾಮಾಜಿಕ ಸೇವೆ ಮಾಡಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರು ಶಿಬಿರದಿಂದ ತಮ್ಮೆಲ್ಲರಿಗೆ ಆತ್ಮ ವಿಕಾಸವಾಗಿದೆ. ನಿಜಗುಣ ಶಿವಯೋಗಿಗಳು ರಚಿಸಿದ ವಿವೇಕ ಚಿಂತಾಮಣಿ ಗ್ರಂಥವು ಆಧ್ಯಾತ್ಮಿಕ ಮಾಹಿತಿ ಕೃತಿಯಾಗಿದೆ. ಮನಸ್ಸಿನಲ್ಲಿ ಉಂಟಾಗುವ ದ್ವಂದ್ವಗಳಿಗೆ ಇಲ್ಲಿ ಉತ್ತರವಿದೆ. ಅಜ್ಞಾನ ನಿವಾರಣೆಯಾಗಿ ವಿಶಿಷ್ಟ ಅನುಭವ ಮನದಲ್ಲಿ ಉಂಟಾಗುತ್ತದೆ. ಈ ಗ್ರಂಥದ ಅಧ್ಯಯನಕ್ಕೆ ಅವಕಾಶ ಕಲ್ಪಿಸಿದ ಪೂಜ್ಯ ಶ್ರೀಗಳವರ ಕಾರ್ಯ ಅನನ್ಯವಾದುದು ಎಂದು ತಿಳಿಸಿದರು.

ಮೈಸೂರು ಪೊಲೀಸ್ ಅಧೀಕ್ಷಕರಾದ ಶ್ರೀ ಮಲ್ಲಿಕಾರ್ಜುನ್ ಬಾಲದಂಡಿಯವರು, ಸಮಾಜದ ಬದಲಾವಣೆಗೆ ಕೇವಲ ಶಸ್ತ್ರವನ್ನು ಬಳಸಿದರೆ ಮಾತ್ರ ಸಾಲದು, ಶಾಸ್ತ್ರವು ಬೇಕು. ಸಮಾಜದ ಸುಧಾರಣೆಗೆ ಆಧ್ಯಾತ್ಮಿಕ ಚಿಂತಕರ ಮಾರ್ಗದರ್ಶನ ಅವಶ್ಯಕವಾಗಿದೆ ಎಂದು ಹೇಳಿದರು.

ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್.ವಿ. ವೆಂಕಟೇಶ್‌ರವರು, ವಿಜ್ಞಾನ ಹಾಗೂ ತಾಂತ್ರಿಕತೆಯ ಸಹಾಯದಿಂದ ಪ್ರಪಂಚ ಮುಂದುವರೆದಿದೆ. ಆದರೆ ಸಮಾಜದಲ್ಲಿ ಶಾಂತಿಯುತ ಜೀವನ ನಡೆಸಲು ಆಧ್ಯಾತ್ಮಿಕ ಅರಿವು ಬಹು ಮುಖ್ಯವಾಗಿದೆ. ಯುವ ಪೀಳಿಗೆಯು ಮಾದಕ ವ್ಯಸನಗಳಿಗೆ ತುತ್ತಾಗುತ್ತಿದ್ದಾರೆ. ಅವರ ನಡೆನುಡಿಗಳ ಸುಧಾರಣೆಗೆ ಗುರು ಹಿರಿಯರ ಕೃಪೆ ಬಹಳ ಮುಖ್ಯವಾಗಿದೆ ಎಂದು ತಿಳಿಸಿದರು.



ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಅಧ್ಯಯನ ಶಿಬಿರದಲ್ಲಿ ಕೈವಾರ ಶ್ರೀಕ್ಷೇತ್ರದ ಧರ್ಮಾಧಿಕಾರಿಗಳಾದ ಡಾ. ಎಂ.ಆರ್. ಜಯರಾಂರವರು ಸಮಾರೋಪ ಭಾಷಣ ಮಾಡಿದರು. ಶ್ರೀ ಹೆಚ್.ಎ. ವೆಂಕಟೇಶ್, ಶ್ರೀ ಮಲ್ಲಿಕಾರ್ಜುನ್ ಬಾಲದಂಡಿ, ಶ್ರೀ ಮಲ್ಲಯ್ಯಸ್ವಾಮಿಗಳು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಹಾಗೂ ಪ್ರೊ. ಕೆ. ಅನಂತರಾಮುರವರುಗಳಿದ್ದಾರೆ. (25 ಮೇ 2026)

ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಕೆ. ಅನಂತರಾಮುರವರು, ಶಿಬಿರವು ಯಶಸ್ವಿಯಾಗಿ ಸಂಪೂರ್ಣಗೊಂಡಿದೆ. ಸಾಧನೆಯ ಮೂಲ ಬೇರುಗಳು ಸುತ್ತೂರು ಶ್ರೀಕ್ಷೇತ್ರದಲ್ಲಿದ್ದು ಅದರ ಫಲ ರಾಷ್ಟ್ರಾದ್ಯಂತ ವ್ಯಾಪಿಸಿದೆ. ಮನುಷ್ಯನು ತಾನು ಕಲಿತ ವಿದ್ಯೆಯನ್ನು ಸಮಾಜಕ್ಕೆ ಉಪಯುಕ್ತವಾಗುವಂತೆ ಬಳಸುವುದೇ ನಿಜವಾದ ವಿವೇಕ. 'ವಸುದೈವ ಕುಟುಂಬಕಂ' ಎನ್ನುವಂತೆ ವಿಶ್ವಮಾನವ ಪರಿಕಲ್ಪನೆಯನ್ನು ಈ ಶಿಬಿರಗಳು ನೀಡಿವೆ ಎಂದು ತಿಳಿಸಿದರು.

ಘೋಡಗೇರಿ ಶ್ರೀ ಶಿವಾನಂದ ಮಠದ ಶ್ರೀ ಮಲ್ಲಯ್ಯ ಸ್ವಾಮಿಗಳು ಮನುಷ್ಯನ ಅಂತರಂಗ ಬಹಿರಂಗಗಳೆರಡು ಪರಿಶುದ್ಧವಾಗಿರಬೇಕು. ಶರೀರ, ಮಾತು ಹಾಗೂ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು ನುಡಿದಂತೆ ನಡೆಯಬೇಕು ಎಂದರು. ವಿವೇಕ ಚಿಂತಾಮಣಿಯ ಎಂಟು, ಒಂಭತ್ತು ಹಾಗೂ ಹತ್ತನೆಯ ಪರಿಚ್ಛೇದಗಳಲ್ಲಿ ಬರುವ ಕ್ರಿಯಾಶಕ್ತಿ, ಮಾತೃತ್ವ ಶಕ್ತಿ, ಮಹೇಶ್ವರ ಶಕ್ತಿ, ಸದಾಶಿವ ಶಕ್ತಿ ಹಾಗೂ ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗಗಳ ಬಗ್ಗೆ ವಿವರಿಸಿದರು.

ಹುಲಿಯೂರು ದುರ್ಗದ ಶ್ರೀ ಸಿದ್ದಲಿಂಗ ಶಿವಾನಂದ ಸ್ವಾಮಿಗಳು, ಸಾದ್ವಿ ಉನ್ಮೇಷಭಾರತಿ ಮಾತಾಜಿ, ಶ್ರೀ ಬಿ. ಎಸ್. ಜನಗೊಂಡ, ಶ್ರೀಮತಿ ಅರುಣಾ ಶಿರಗುಪ್ಪಿ ಹಾಗೂ ಕು. ಸಿಂಚನಾರವರುಗಳು ಅನಿಸಿಕೆಯನ್ನು ಹಂಚಿಕೊಂಡರು

ಮಾತೆ ಬಸವಾಂಜಲಿಯವರು ಪ್ರಾರ್ಥಿಸಿದರು. ಚುಂಚನಹಳ್ಳಿ ಮತ್ತು ನವಿಲೂರು ಮಠಗಳ ಶ್ರೀ ಚನ್ನಬಸವ ಸ್ವಾಮೀಜಿಗಳು ಸ್ವಾಗತಿಸಿದರು. ಶ್ರೀ ಕೆ.ಪಿ. ಬಸವರಾಜು ಶಿಬಿರದ ವರದಿ ಮಂಡಿಸಿದರು. ಶ್ರೀ ಬಿ. ಮಾದಪ್ಪ ವಂದಿಸಿದರು. ಆಲಮಟ್ಟಿಯ ಡಾ. ರುದ್ರಮುನಿ ಸ್ವಾಮಿಗಳು ನಿರೂಪಿಸಿದರು.

# ಪರಮಾತ್ಮನ ಚಿಂತನೆಯಿಂದ ಮೋಕ್ಷ ಸಾಧ್ಯ



ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗಾಗಿ ಏರ್ಪಡಿಸಿದ್ದ ಅಧ್ಯಯನ ಶಿಬಿರದಲ್ಲಿ ಘೋಡಗೇರಿ ಶ್ರೀ ಶಿವಾನಂದ ಮಠದ ಶ್ರೀ ಮಲ್ಲಯ್ಯ ಸ್ವಾಮಿಗಳು ಉಪನ್ಯಾಸ ನೀಡಿದರು. (24 ಮೇ 2026)

ಪರಮಾತ್ಮನ ಚಿಂತನೆಯಿಂದ ಮೋಕ್ಷ ಸಾಧ್ಯ ಎಂದು ಘೋಡಗೇರಿ ಶ್ರೀ ಶಿವಾನಂದ ಮಠದ ಶ್ರೀ ಮಲ್ಲಯ್ಯ ಸ್ವಾಮಿಗಳು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿ ಕೃತಿಯ ಕುರಿತು ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಏರ್ಪಡಿಸಿರುವ ಅಧ್ಯಯನ ಶಿಬಿರದಲ್ಲಿ ದಿನಾಂಕ 24.5.2026ರಂದು ಅವರು 'ಮೃತ್ಯುಲೋಕ ಸ್ಥಿತಿ ವರ್ಣನೆ' ವಿಷಯ ಕುರಿತು ಉಪನ್ಯಾಸ ನೀಡಿದರು. ಜಗತ್ತಿಗೆ ದೇವರೇ ಆಶ್ರಯದಾತ. ಲೋಕವನ್ನು ನಡೆಸುತ್ತಿರುವ ಅವನೇ ಸೃಷ್ಟಿ, ಸ್ಥಿತಿ, ಲಯಕ್ಕೆ ಕಾರಣನಾಗಿದ್ದಾನೆ ಎಂದರು. ವಿವೇಕ ಚಿಂತಾಮಣಿಯ ಷಷ್ಠಮ ಹಾಗೂ ಸಪ್ತಮ ಪರಿಚ್ಛೇದಗಳಲ್ಲಿ ಬರುವ ದೇವಲೋಕ, ಊರ್ಧ್ವಲೋಕ, ತಪೋಲೋಕ, ಸತ್ಯಲೋಕ, ಶಿವಲೋಕದ ಬಗ್ಗೆ ವಿವರಿಸಿ ವಿವಿಧ ದಿಕ್ಕಿನಲ್ಲಿ ನೆಲೆಸಿರುವ ದೇವತೆಗಳು, ಶತರುದ್ರರು ಹಾಗೂ ಅಗ್ನಿ ತತ್ವ, ವಾಯು ತತ್ವ, ಜಲ ತತ್ವ, ಪೃಥ್ವಿ ಪಂಚಮಹಾಭೂತ ತತ್ವಗಳ ಬಗ್ಗೆ ತಿಳಿಸಿದರು.

ನಿವೃತ್ತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಬದುಕು ಪಾಪ ಪುಣ್ಯಗಳ ಸಂಕೀರ್ಣ ಫಲವಾಗಿದೆ. ಪಂಚ ಮಹಾ ಪಾಪಗಳಿಂದ ದೂರವಿರಬೇಕು. ಜೀವನದಲ್ಲಿ ಪಾಪ ವಿಮೋಚನೆಗಾಗಿ ಪುಣ್ಯಕ್ಷೇತ್ರಗಳ ಯಾತ್ರೆ, ಪುಣ್ಯನದಿಗಳಲ್ಲಿ ಸ್ನಾನ, ದಾನಧರ್ಮ, ಹೋಮಹವನ ಹಾಗೂ ಜಪತಪಗಳನ್ನು ಮಾಡಬೇಕು. ಮಹಾಪುರುಷರ ಸಂಗದಿಂದ ಪುಣ್ಯ

ಸಂಪಾದಿಸಬಹುದು ಎಂದರು. ವಿವೇಕ ಚಿಂತಾಮಣಿಯ ತೃತೀಯ ಮತ್ತು ಚತುರ್ಥ ಪರಿಚ್ಛೇದಗಳಲ್ಲಿ ಬರುವ ಬ್ರಹ್ಮಾಂಡ, ಸಪ್ತಲೋಕಗಳು, ಪಂಚಮಹಾಪಾತಕಗಳು, ಉಪಪಾತಕಗಳು ಹಾಗೂ ಸಪ್ತ ಪಾತಾಳ ಲೋಕಗಳನ್ನು ವಿವರಿಸಿದರು. ಜಂಬೂದ್ವೀಪ ಸ್ಥಿತಿ ವರ್ಣನೆಯಲ್ಲಿ ಭಾರತ ದೇಶದ ನದಿ, ಅರಣ್ಯ, ಆಳ್ವಿಕೆ ಮಾಡಿದ ಚಕ್ರವರ್ತಿಗಳು, ಕವಿಗಳು, ವಾಗ್ಮಿಗಳು, ವಿವಿಧ ರಾಗ–ತಾಳಗಳು, ಕಲೆಗಳು, ಛಂದಸ್ಸು ಮತ್ತು ಅಲಂಕಾರಗಳ ಬಗ್ಗೆ ವರ್ಣಿಸಿದರು. ಭರತ ಭೂಮಿಯಲ್ಲಿರುವ ಏಳು ಮೋಕ್ಷ ಕ್ಷೇತ್ರಗಳಾದ ಅಯೋಧ್ಯ, ಮಥುರ, ಹರಿದ್ವಾರ, ಮಾಯಾಪುರಿ, ಕಾಶಿ, ಕಂಚಿ, ಆವಂತಿಕ ಹಾಗೂ ದ್ವಾರಕ ಪುಣ್ಯಕ್ಷೇತ್ರಗಳ ಮಹಿಮೆಯನ್ನು ತಿಳಿಸಿದರು. ಸದ್ಗುರುವು ಭಕ್ತನನ್ನು ಕತ್ತಲಿನಿಂದ ಜ್ಞಾನವೆಂಬ ಬೆಳಕಿನ ಕಡೆಗೆ ಕರೆದೊಯ್ಯುತ್ತಾನೆ. ಮನಸ್ಸಿನಲ್ಲಿ ಸದಾ ಗುರುವಿನ ಸ್ಮರಣೆಯನ್ನು ಮಾಡಬೇಕು ಎಂದರು.

ಖ್ಯಾತ ಯೋಗಗುರುಗಳಾದ ಡಾ. ಕೆ. ರಾಘವೇಂದ್ರ ಪೈಯವರು, ಜಗತ್ತಿಗೆ ಯೋಗವನ್ನು ನೀಡಿದ್ದು ಭಾರತ, ಯೋಗ ಮತ್ತು ಧ್ಯಾನದಿಂದ ದೇಹ ಮತ್ತು ಮನಸ್ಸನ್ನು ಶಾಂತಗೊಳಿಸಬಹುದು. ಮುದ್ರೆಗಳಲ್ಲಿ ಸಹ ಶಕ್ತಿಯಿದೆ. ಮುದ್ರೆಗಳನ್ನು ಸೂಕ್ತ ರೀತಿಯಲ್ಲಿ ಮಾಡಿದರೆ ಚಕ್ರಗಳನ್ನು ಜಾಗೃತಗೊಳಿಸಿಕೊಳ್ಳಬಹುದು. ಯೋಗದಲ್ಲಿ ಋತುಮಾನಕ್ಕೆ ಅನುಗುಣವಾಗಿ ಆಹಾರವನ್ನು ಸೇವಿಸಲು ತಿಳಿಸಿದ್ದಾರೆ. ಯೋಗ–ಧ್ಯಾನಮುದ್ರೆಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಬದುಕಿನಲ್ಲಿ ದೈವಿಕತೆಯನ್ನು ಹೊಂದಬಹುದು ಎಂದು ತಿಳಿಸಿದರು.

*****



ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಧ್ಯಯನ ಶಿಬಿರದಲ್ಲಿ ಪರಮಪೂಜ್ಯ ಜಗದ್ಗುರುಗಳವರೊಂದಿಗೆ ಸಂಪನ್ಮೂಲ ವ್ಯಕ್ತಿಗಳು, ಸಂಚಾಲಕರುಗಳು ಹಾಗೂ ಶಿಬಿರಾರ್ಥಿಗಳು

# ಆರೋಗ್ಯಕರ ಜೀವನ ಶೈಲಿ ಕುರಿತು ಯುವ ಜನತೆ ಗಮನ ಹರಿಸಬೇಕು




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನಲ್ಲಿ 'ಬೊಜ್ಜುಮುಕ್ತ ಭಾರತ' ಅಭಿಯಾನದಡಿಯಲ್ಲಿ ಕು. ತಾಪ್ಸಿ ಉಪಾಧ್ಯಾಯ್‌ರವರು ವಿಶೇಷ ಉಪನ್ಯಾಸ ನೀಡಿದರು. (5 ಮೇ 2026)

ಇಂದಿನ ಆಧುನಿಕ ಜೀವನ ಶೈಲಿ ಹಾಗೂ ಆಹಾರ ಸೇವನೆಯು ಜನರನ್ನು ಹೆಚ್ಚು ಅನಾರೋಗ್ಯಕ್ಕೆ ತುತ್ತಾಗುವಂತೆ ಮಾಡುತ್ತಿದೆ. ಇದರಿಂದ ಯುವ ಜನತೆ ಚಿಕ್ಕ ವಯಸ್ಸಿನಲ್ಲಿಯೇ ಮಾರಣಾಂತಿಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಯುವ ಜನತೆ ಆರೋಗ್ಯಕರ ಜೀವನ ಶೈಲಿ ಕುರಿತು ಹೆಚ್ಚು ಗಮನಹರಿಸಬೇಕು ಎಂದು ಮಿಷನ್ ಹೆಲ್ದಿ ಭಾರತ್ (ಎಂಹೆಚ್‌ಬಿ) ಸಂಸ್ಥೆಯ ಸ್ಥಾಪಕರು ಹಾಗೂ ಬೊಜ್ಜು ಮುಕ್ತ ಭಾರತ ಅಭಿಯಾನದ ರುವಾರಿಗಳು ಆದ ಕು. ತಾಪ್ಸಿ ಉಪಾಧ್ಯಾಯ್‌ರವರು ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 5.5.2026 ರಂದು ಬೊಜ್ಜು ಮುಕ್ತ ಭಾರತ ಅಭಿಯಾನದಡಿಯಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು. ಆರೋಗ್ಯವನ್ನು ಭಾಗ್ಯ ಎನ್ನುವುದಕ್ಕಿಂತಲೂ ಅದರ ಸ್ಥಾನ ಹೆಚ್ಚಿನದ್ದಾಗಿದೆ. ಪ್ರತಿಯೊಬ್ಬರು ತಮ್ಮ ಆರೋಗ್ಯ ಕಾಳಜಿಗಾಗಿ ಸಮಯ ನೀಡಲೇಬೇಕು. ಇಂದಿನ ಯುವ ಜನತೆ ಅಗತ್ಯವಾಗಿ ತಮ್ಮ ಮುಂದಿನ ಆರೋಗ್ಯಕರವಾದ ಬದುಕಿಗಾಗಿ ಇಂದೇ ಆರೋಗ್ಯದ ಕಾಳಜಿ ಮಾಡಬೇಕಿದೆ. ಧ್ಯಾನ, ಯೋಗ ಮಾಡಬೇಕು. ಕರಿದ ಪದಾರ್ಥಗಳು ಹಾಗೂ ಹೊರಗಿನ ತಿಂಡಿಗಳ ತ್ಯಜಿಸಬೇಕು, ಮೊಬೈಲ್ ವೀಕ್ಷಣೆಯ ಸಮಯವನ್ನು ಕಡಿತಗೊಳಿಸಬೇಕು. ಹಾಗೂ ಇತರರ ಬಗ್ಗೆ ಕಾಳಜಿ ವಹಿಸುವುದರ ಜೊತೆಗೆ ತಮ್ಮ ಆರೋಗ್ಯಕರ ಭಾವನೆಗಳನ್ನು ಇತರರೊಡನೆ ಹಂಚಿಕೊಳ್ಳಬೇಕು–ಈ ಪಂಚ ಸೂತ್ರಗಳನ್ನು ಯುವ ಸಮುದಾಯವು ಅನುಸರಿಸಬೇಕು. ರಾಸಾಯನಿಕ ಮುಕ್ತ ಸಾವಯವ

ಕೃಷಿಯಿಂದ ಬೆಳೆದ ಆಹಾರ ಪದಾರ್ಥಗಳ ಬಳಕೆಯಿಂದ ನಮ್ಮ ಆರೋಗ್ಯ ಮತ್ತಷ್ಟು ಹೆಚ್ಚುತ್ತದೆ. ಮನೆಯ ಆಹಾರ ಪದಾರ್ಥಗಳನ್ನು ಹೊರತುಪಡಿಸಿ, ಹೊರಗಿನ ಆಹಾರ ಪದಾರ್ಥಗಳ ಸೇವನೆಯನ್ನು ನಿಲ್ಲಿಸಬೇಕು. ಕೆಲವು ಉದ್ಯಮಗಳು ತಮ್ಮ ಲಾಭಕ್ಕಾಗಿ ಕೆಲವು ಡೈರಿ ಉತ್ಪನ್ನಗಳನ್ನು ತಯಾರಿಸುತ್ತಿವೆ. ಅವು ಕೂಡ ಇಂದು ಜನರ ಆರೋಗ್ಯವನ್ನು ಹಾಳುಮಾಡುತ್ತಿವೆ. ಒಳ್ಳೆಯ ಉತ್ಪನ್ನಗಳನ್ನು ಮಾತ್ರ ಆಯ್ಕೆ ಮಾಡಿ ಬಳಸಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಮಾತನಾಡಿ ಭಾರತದ ಜನಸಂಖ್ಯೆ ಇಂದು ತೀವ್ರಗತಿಯಲ್ಲಿ ಹೆಚ್ಚುತ್ತಿದ್ದು ಜನರ ಆರೋಗ್ಯದ ಕಾಳಜಿಗಳು ಕೂಡ ಹೆಚ್ಚಾಗಬೇಕಿದೆ. ಆಧುನಿಕ ಕಾಲಕ್ಕೆ ತಕ್ಕಂತೆ ಸಂಪ್ರದಾಯ, ಸಂಸ್ಕೃತಿಯಲ್ಲಿ ಬದಲಾವಣೆಯಾಗುತ್ತಿರುವಂತೆ ಇಂದಿನ ಜನರ ಜೀವನ ಶೈಲಿಯಲ್ಲಿಯೂ ಆಗುತ್ತಿವೆ. ಅದರಲ್ಲಿ ಆಹಾರ ಪದ್ಧತಿಯೂ ಒಂದು. ಇಂದಿನ ಆಲೋಚನರಹಿತ ಅನಿಯಂತ್ರಿತ ಆಹಾರ ಕ್ರಮದಿಂದ ಅನೇಕ ರೋಗಗಳಿಗೆ ಜನರು ತುತ್ತಾಗುತ್ತಿದ್ದಾರೆ. ಅದರಲ್ಲಿ ಈ ಅತಿಯಾದ ಬೊಜ್ಜಿನ ಸಮಸ್ಯೆಯು ಒಂದಾಗಿದೆ. ಅತಿಯಾದ ಬೊಜ್ಜಿನಿಂದ ಮಾರಣಾಂತಿಕ ಹೃದಯದ ಸಮಸ್ಯೆಗಳು ಯುವ ವಯಸ್ಕರಲ್ಲಿಯೇ ಕಾಣಿಸುತ್ತಿರುವುದು ಅತ್ಯಂತ ಅಪಾಯಕಾರಿ. ಭಾರತವು ಇಂತಹ ಸಮಸ್ಯೆಗಳಿಂದ ಪಾರಾಗಿ ಆರೋಗ್ಯಯುತ ಹಾಗೂ ಶಕ್ತಿಯುತ ರಾಷ್ಟ್ರವಾಗಬೇಕಾದರೆ ಯುವ ಜನತೆಯಲ್ಲಿ ಆರೋಗ್ಯದ ಕಾಳಜಿಯು ಹೆಚ್ಚಬೇಕು. ಈ ನಿಟ್ಟಿನಲ್ಲಿ ಕು. ತಾಪ್ಸಿ ಉಪಾಧ್ಯಾಯ್‌ರವರು ಹಮ್ಮಿಕೊಂಡಿರುವ ಈ ಯೋಜನೆ ದೇಶದ ಯುವ ಜನತೆಗೆ ಅತ್ಯಂತ ಉಪಯುಕ್ತವಾಗಿದೆ. ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಪ್ರಭಾರ ಪ್ರಾಂಶುಪಾಲರಾದ ಡಾ. ಮಂಜುನಾಥರವರು ಹಾಗೂ ಮಿಷನ್ ಹೆಲ್ತಿ ಭಾರತ್‌ನ ಸಹಭಾಗಿಗಳಾಗಿರುವ ಶ್ರೀ ಚಿದಾನಂದರವರು ಉಪಸ್ಥಿತರಿದ್ದರು. ಕು. ಪೂರ್ವಿಕ ಮತ್ತು ತಂಡದವರು ಪ್ರಾರ್ಥಿಸಿದರು. ಡಾ. ಎಂ.ಪಿ. ಸೋಮಶೇಖರ್‌ರವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಅಧ್ಯಾಪಕರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


**ಮಾಸಿಕ ಸಾಮೂಹಿಕ ವಿವಾಹ 2026**
**ಸುತ್ತೂರು ಶ್ರೀಕ್ಷೇತ್ರ**



**ಜುಲೈ 5 ಭಾನುವಾರ**

ವಿವರಗಳಿಗೆ ಸಂಪರ್ಕಿಸಿ :
ಆಡಳಿತಾಧಿಕಾರಿಗಳು
ಜೆಎಸ್ಎಸ್ ಸಂಸ್ಥೆಗಳು, ಸುತ್ತೂರು
ದೂರವಾಣಿ : 08221–232223, 232224

# ಕೈಗಳ ಸ್ವಚ್ಛತೆಗೆ ಪ್ರಧಾನ ಆದ್ಯತೆ ನೀಡಬೇಕು




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ 'ವಿಶ್ವ ಕೈ ನೈರ್ಮಲ್ಯ ದಿನಾಚರಣೆ'ಯನ್ನು ಡಾ. ಸಿ.ಪಿ. ಮಧುರವರು ಉದ್ಘಾಟಿಸುತ್ತಿರುವುದು. (5 ಮೇ 2026)

ಆರೋಗ್ಯಕರ ಜೀವನಕ್ಕಾಗಿ ಕೈಗಳ ಸ್ವಚ್ಛತೆಗೆ ಪ್ರಧಾನ ಆದ್ಯತೆ ನೀಡಬೇಕು, ಇದು ಕಾಯಿಲೆಗಳನ್ನು ತಡೆಯುವ ಅತ್ಯಂತ ಸರಳ ಮತ್ತು ಪರಿಣಾಮಕಾರಿ ಮಾರ್ಗವಾಗಿದೆ ಎಂದು ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಹೇಳಿದರು.

**ಜೆಎಸ್‌ಎಸ್ ಆಸ್ಪತ್ರೆಯಲ್ಲಿ** ದಿನಾಂಕ 5.5.2026ರಂದು ಆಯೋಜಿಸಿದ್ದ ವಿಶ್ವ ಕೈ ನೈರ್ಮಲ್ಯ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸೋಂಕು ಅಥವಾ ಕೀಟಾಣುಗಳು ನಮ್ಮ ದೇಹವನ್ನು ಪ್ರವೇಶಿಸುವುದು ಕೈಗಳ ಮೂಲಕ. ಆದ್ದರಿಂದ ಕೈಗಳ ಸ್ವಚ್ಛತೆಗೆ ಪ್ರಧಾನ ಆದ್ಯತೆ ನೀಡಬೇಕು. ವೈದ್ಯರುಗಳೂ ಕೂಡ ರೋಗಿಯನ್ನು ಮುಟ್ಟುವ ಮುನ್ನ ಮತ್ತು ನಂತರ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕು ಇದರಿಂದ ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುವ ಸಾಧ್ಯತೆ ಕಡಿಮೆ. ಈ ಅಭ್ಯಾಸವನ್ನು ಎಲ್ಲಾ ಆರೋಗ್ಯ ಕಾರ್ಯಕರ್ತರು ಕಡ್ಡಾಯವಾಗಿ ರೂಢಿಸಿಕೊಳ್ಳಬೇಕು. ಇದರ ಬಗ್ಗೆ ಜಾಗೃತಿ ಮತ್ತು ಅರಿವು ಬಹಳ ಮುಖ್ಯ ಎಂದು ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ಆಸ್ಪತ್ರೆಯ ಉಪ ನಿರ್ದೇಶಕರಾದ ಡಾ. ಸುಮನರವರು ಮಾತನಾಡಿ, ರೋಗ ಹರಡುವುದನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳಬೇಕು. ಆಸ್ಪತ್ರೆಯಲ್ಲಿ ನರ್ಸ್‌ಗಳ ಪಾತ್ರ ಬಹಳ ಪ್ರಮುಖವಾದದ್ದು. ಅವರುಗಳು ವಾರ್ಡ್‌ಗೆ ಪ್ರವೇಶಿಸುವ ವೈದ್ಯರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಕೈ ನೈರ್ಮಲ್ಯ ಬಗ್ಗೆ ಜಾಗೃತಿ ಮೂಡಿಸಬೇಕು ಮತ್ತು ಕಡ್ಡಾಯವಾಗಿ ಕೈ ತೊಳೆಯಲು ಹೇಳಬೇಕು ಎಂದರು. ಸ್ವರಚಿತ ಹಾಡಿನ ಮೂಲಕ ಕೈ ತೊಳೆಯುವ ವಿಧಾನವನ್ನು ತಿಳಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ

ಜೆಎಸ್‌ಎಸ್ ಆಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥರಾದ ಡಾ. ಡಿ. ಶ್ರೀನಿವಾಸ್‌ಮೂರ್ತಿರವರು ಮಾತನಾಡಿ, ಕೈ ನೈರ್ಮಲ್ಯ ಎಂಬುದು ತುಂಬಾ ಚಿಕ್ಕ ವಿಷಯವಾಗಿದ್ದರು ಇದು ಸಾವನ್ನು ತಪ್ಪಿಸುತ್ತದೆ. ನಮ್ಮಿಂದ ಇನ್ನೊಬ್ಬರಿಗೆ ತೊಂದರೆ ಆಗಬಾರದು ಸೋಂಕು ಇರುವ ವ್ಯಕ್ತಿಯನ್ನು ಮುಟ್ಟಿ ಆ ಸೋಂಕು ನಮ್ಮ ಕೈಗಳಿಂದ ಮತ್ತೊಬ್ಬರಿಗೆ ಹರಡಿ ಅವರ ಪ್ರಾಣಕ್ಕೆ ಕುತ್ತಾಗಬಹುದು. ಆದ್ದರಿಂದ ನಮಗೋಸ್ಕರ ಮತ್ತು ಬೇರೆಯವರಿಗೋಸ್ಕರ ನಾವು ನಮ್ಮ ಕೈಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಕೈಗಳನ್ನು ಸ್ವಚ್ಛಗೊಳಿಸುವುದು ಪ್ರಾಥಮಿಕ ಮತ್ತು ಸುಲಭವಾದ ಮಾರ್ಗವಾಗಿದೆ. ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳ ಹರಡುವಿಕೆಯನ್ನು ತಡೆಯುವ ಮೂಲಕ ಅನೇಕ ಮಾರಣಾಂತಿಕ ಕಾಯಿಲೆಗಳಿಂದ ರಕ್ಷಣೆ ಪಡೆಯಬಹುದು ಎಂದರು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಸೋಂಕು ನಿಯಂತ್ರಣ ಸಮಿತಿಯ ಕಾರ್ಯದರ್ಶಿಗಳಾದ ಡಾ. ಕೆ.ಬಿ. ಚೇತಕ್, ನರ್ಸಿಂಗ್ ಸೇವೆಗಳ ಮುಖ್ಯಸ್ಥರಾದ ಶ್ರೀಮತಿ ಜಾನೆಟ್ ಮಥಾಯಸ್ ಇನ್ನಿತರರು ಉಪಸ್ಥಿತರಿದ್ದರು.

□

## ಸೇವೆಯೇ ಪರಮ ಧರ್ಮ

ನರ್ಸಿಂಗ್ ಎಂಬುದು ಕೇವಲ ಒಂದು ವೃತ್ತಿಯಲ್ಲ, ಅದು ಸೇವೆ, ತ್ಯಾಗ, ಕರುಣೆ ಮತ್ತು ಮಾನವೀಯತೆಯ ಪ್ರತೀಕವಾಗಿದೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಸೇವೆಗೆ ಅತ್ಯಂತ ಮಹತ್ವ ನೀಡಲಾಗಿದೆ. ಸೇವೆಯೇ ಪರಮಧರ್ಮ ಎಂಬ ಮಾತಿನಂತೆ ನರ್ಸಿಂಗ್ ವೃತ್ತಿಯು ನಿಜವಾದ ಸೇವೆಯ ಪ್ರತೀಕವಾಗಿದೆ ಎಂದು ಬೆಂಗಳೂರಿನ ನಿಮ್ಹಾನ್ಸ್‌ನ ಕಾಲೇಜ್ ಆಫ್ ನರ್ಸಿಂಗ್‌ನ ಸಹ ಪ್ರಾಧ್ಯಾಪಕರಾದ ಡಾ. ಪ್ರತಿಭಾಸ್ವಾಮಿಯವರು ಹೇಳಿದರು.

**ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್** ವತಿಯಿಂದ ದಿನಾಂಕ 9.5.2026 ರಂದು ಮೈಸೂರಿನ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ನಡೆದ 38ನೇ ಸಾಲಿನ ಜಿಎನ್‌ಎಂ ನರ್ಸಿಂಗ್ ವಿದ್ಯಾರ್ಥಿಗಳಿಗೆ ಜ್ಯೋತಿ ಬೆಳಗುವಿಕೆ ಹಾಗು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ನರ್ಸಿಂಗ್ ವಿದ್ಯಾಭ್ಯಾಸಕ್ಕೆ ಪ್ರತಿಷ್ಠಿತ ಜೆಎಸ್‌ಎಸ್ ಸಂಸ್ಥೆಯನ್ನು ಆಯ್ಕೆಮಾಡಿಕೊಂಡಿರುವುದಕ್ಕೆ ಅಭಿನಂದನೆಗಳು. ಒಬ್ಬ ಉತ್ತಮ ಶುಶ್ರೂಷಕರಿಗೆ ಅನುಕಂಪ ತುಂಬಾ ಮುಖ್ಯ, ಏಕೆಂದರೆ ರೋಗಿಗಳಿಗೆ ಔಷಧಿಯಷ್ಟೇ ಪ್ರೀತಿ, ಧೈರ್ಯ ಮತ್ತು ಮಾನಸಿಕ ಬೆಂಬಲವು ಅಗತ್ಯವಾಗಿದೆ. ಅನುಕಂಪವಿರುವ ಶುಶ್ರೂಷಕರು ರೋಗಿಯ ವಿಶ್ವಾಸವನ್ನು ಹೆಚ್ಚಿಸಿ, ಉತ್ತಮ ಆರೈಕೆಯನ್ನು ನೀಡಲು ಸಹಾಯ ಮಾಡುತ್ತದೆ. ಸಹಾನುಭೂತಿ ರೋಗಿಗೆ ಮಾನಸಿಕ ಸಮಾಧಾನ ನೀಡುತ್ತದೆ. ನನ್ನ ಬಗ್ಗೆ ಕಾಳಜಿ ವಹಿಸುವವರು ಇದ್ದಾರೆ ಎಂಬ ಭಾವನೆಯನ್ನು ರೋಗಿ ಹೊಂದುತ್ತಾನೆ. ನರ್ಸಿಂಗ್ ವೃತ್ತಿಯಲ್ಲಿ ಉತ್ತಮ ಸಂವಹನ ಕೌಶಲ್ಯ ಅತ್ಯಂತ ಮುಖ್ಯವಾಗಿದೆ. ನರ್ಸಿಂಗ್ ಕ್ಷೇತ್ರದಲ್ಲಿ ರೋಗಿಯ ಸುರಕ್ಷತೆ ಅತ್ಯಂತ ಮುಖ್ಯ. ತಪ್ಪು ಔಷಧಿ, ಚಿಕಿತ್ಸೆ ಅಥವಾ ತಪ್ಪಾದ ಮಾಹಿತಿಯಿಂದ ರೋಗಿಗೆ ಹಾನಿಯಾಗಬಹುದು, ಅಂತಹ ಸಂಧರ್ಭಗಳಲ್ಲಿ ಸಂವಹನ ಕೌಶಲ್ಯಯುಳ್ಳ ಶುಶ್ರೂಷಕರು ಸ್ಪಷ್ಟವಾಗಿ ಮಾತನಾಡಿ ಸಮಸ್ಯೆಯನ್ನು ಸರಿಪಡಿಸುತ್ತಾರೆ. ನರ್ಸಿಂಗ್ ತರಬೇತಿ



ಮೈಸೂರಿನ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ 38ನೇ ಬ್ಯಾಚಿನ ಜಿಎನ್‌ಎಂ ನರ್ಸಿಂಗ್ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭವನ್ನು ಬೆಂಗಳೂರಿನ ನಿಮ್ಹಾನ್ಸ್‌ನ ಕಾಲೇಜ್ ಆಫ್ ನರ್ಸಿಂಗ್‌ನ ಸಹ ಪ್ರಾಧ್ಯಾಪಕರಾದ ಡಾ. ಪ್ರತಿಭಾ ಸ್ವಾಮಿಯವರು ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸುತ್ತಿರುವುದು. (9 ಮೇ 2026)

ಮುಗಿಸಿದ ನಂತರ ವಿಶ್ವದೆಲ್ಲೆಡೆ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಲಭ್ಯವಿದೆ. ಜೆಎಸ್‌ಎಸ್ ಸಂಸ್ಥೆಯಲ್ಲಿ ಪಾಲಿಸುತ್ತಿರುವ ಸಂಸ್ಕೃತಿ, ಶಿಸ್ತು, ಸಮಯಪಾಲನೆ ಮತ್ತು ಸಮನ್ವಯತೆ ಆದರಣೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು, ನರ್ಸಿಂಗ್ ಸಂಸ್ಥಾಪಕರಾದ ಮಿಸ್ ಫ್ಲಾರೆನ್ಸ್ ನೈಟಿಂಗೇಲ್‌ರವರು ರೋಗಿಯ ಸೇವೆಯಲ್ಲಿ ತೋರಿಸಿದ ಸಮರ್ಪಣೆ ಹಾಗೂ ತ್ಯಾಗ ಶ್ಲಾಘನೀಯ. ತುರ್ತು ಪರಿಸ್ಥಿತಿಗಳ ಸಮಯದಲ್ಲಿ ದಾದಿಯರು ತೋರಿಸುವ ಧೈರ್ಯ ಮತ್ತು ನಿಸ್ವಾರ್ಥ ಸೇವೆ ಬೆಲೆಕಟ್ಟಲಾಗದ್ದು. ಇಂದಿನ ಯುವ ಪೀಳಿಗೆ ನರ್ಸಿಂಗ್ ವೃತ್ತಿಯನ್ನು ಕೇವಲ ಉದ್ಯೋಗವಾಗಿಯಲ್ಲದೆ, ಮಾನವ ಸೇವೆಯ ಅವಕಾಶವಾಗಿ ನೋಡಬೇಕು. ಈ ವೃತ್ತಿಯಲ್ಲಿ ಗೌರವ, ಜವಾಬ್ದಾರಿ ಮತ್ತು ಆತ್ಮ ಸಂತೋಷ ತುಂಬಿರುತ್ತದೆ. ವಿದ್ಯಾರ್ಥಿಗಳ ತಂದೆ ತಾಯಂದಿರು ಅವರ ಜೀವನವನ್ನೇ ಮಕ್ಕಳ ಸಂತೋಷಕ್ಕೆ ಮತ್ತು ಭವಿಷ್ಯಕ್ಕಾಗಿ ಅರ್ಪಿಸಿರುತ್ತಾರೆ. ಆದ್ದರಿಂದ ನೀವು ತೋರಿಸುವ ಪರಿಶ್ರಮ, ಸಮರ್ಪಣೆ ಮತ್ತು ವೃತ್ತಿ ಜೀವನದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದಾಗ ಪೋಷಕರ ತ್ಯಾಗಕ್ಕೆ ಬೆಲೆಸಿಕ್ಕಂತಾಗುತ್ತದೆ. ನೀವು ಯಾವ ತಲೆಮಾರಿಗೆ ಸೇರಿದವರಾಗಿದ್ದರೂ ಜೀವನದಲ್ಲಿ ಸದಾ ಪರಿಶ್ರಮ ಮತ್ತು ನಿತರಂತರತೆಯನ್ನು ಕಾಪಾಡಿಕೊಂಡು ತಂದೆ ತಾಯಿಗಳಿಗೆ

ಗೌರವ ನೀಡಬೇಕು. ಇಂದು ನೀವು ಬೆಳಗಿಸಿದ ದೀಪವು ಅಂಧಕಾರವನ್ನು ದೂರ ಮಾಡುವಂತೆ ನಿಮ್ಮ ಜೀವನವು ಸದಾ ಪ್ರಕಾಶಮಾನವಾಗಿ ಬೆಳಕಿನ ಜ್ಞಾನ, ಸಂತೋಷ ಮತ್ತು ಯಶಸ್ಸಿನಿಂದ ತುಂಬಿರಲಿ ಎಂದು ಹೇಳಿದರು.

ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿಯವರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. 2025–26ನೇ ಶೈಕ್ಷಣಿಕ ಸಾಲಿನ ವಾರ್ಷಿಕ ಕೆಎಸ್‌ಡಿಎನ್‌ಬಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿ ಪಡೆದ 26 ಮಂದಿ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಪ್ರಥಮ ವರ್ಷದ ವಿದ್ಯಾರ್ಥಿನಿ ಕು. ನೇಮಾನಿ ಕೃಷ್ಣ ಮಾಧುರಿ ಹಾಗು ಹಿರಿಯ ವಿದ್ಯಾರ್ಥಿನಿ ಕು. ಎಸ್. ಮೀನಾಯಾದವ್ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಬೋಧಕ ಹಾಗೂ ಬೋಧಕೇತರ ವೃಂದದವರು, ಪೋಷಕರು ಹಾಗು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶ್ರೀಮತಿ ಎಸ್. ನೀತಾದಳ್ವಿಯವರು ಸ್ವಾಗತಿಸಿದರು ಹಾಗು ಹಿರಿಯ ನರ್ಸಿಂಗ್ ಟ್ಯೂಟರ್‌ರಾದ ಶ್ರೀ ಆರ್.ಕೆ. ಮಹದೇವಸ್ವಾಮಿಯವರು ವಂದಿಸಿದರು. ಶ್ರೀಮತಿ ಹೆಚ್. ಎಸ್. ಮಾನಸರವರು ನಿರೂಪಿಸಿದರು.

## ಅಧಿಕ ರಕ್ತದೊತ್ತಡ ನಮ್ಮ ನಡುವಣ ಮೌನಿ ಹಂತಕ

ಅಧಿಕ ರಕ್ತದೊತ್ತಡ ನಮ್ಮ ನಡುವಿನ ನಿಶ್ಶಬ್ದ ಕೊಲೆಗಾರ ಎಂದು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಕೆ.ಎಸ್. ಸದಾನಂದರವರು ಹೇಳಿದರು.

**ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಮತ್ತು ವೈದ್ಯಕೀಯ ವಿಭಾಗ** ದಿನಾಂಕ 17.5.2026ರಂದು ಆಯೋಜಿಸಿದ್ದ ವಿಶ್ವ ಅಧಿಕ ರಕ್ತದೊತ್ತಡ ದಿನಾಚರಣೆ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡಿದರು. ಅಧಿಕ ರಕ್ತದೊತ್ತಡವು ನಮಗೆ ಯಾವುದೇ ಸ್ಪಷ್ಟ ಮುನ್ಸೂಚನೆಗಳನ್ನು ನೀಡದೆ ಅದು ಪ್ರತಿದಿನ ನಿಮ್ಮ ಹೃದಯ, ಮೆದುಳು, ಮೂತ್ರಪಿಂಡ ಮತ್ತು ಕಣ್ಣುಗಳನ್ನು ಸದ್ದಿಲ್ಲದೆ ಹಾನಿಗೊಳಿಸುತ್ತದೆ ಮತ್ತು ಮುಂದೆ ಹೃದಯಾಘಾತ ಹಾಗೂ ಪಾರ್ಶ್ವವಾಯುವಿಗೆ ಕಾರಣವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಬೇಕು ಮುಂಚಿತವಾಗಿ ರೋಗವನ್ನು ಪತ್ತೆಹಚ್ಚಿ ಅದಕ್ಕೆ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಂಡರೆ ಈ ಕಾಯಿಲೆಯನ್ನು ನಿಯಂತ್ರಿಸಬಹುದು ಎಂದರು.

ಕಾರ್ಯಕ್ರಮಕ್ಕೆ ಗೌರವ ಅತಿಥಿಗಳಾಗಿ ಆಗಮಿಸಿದ್ದ ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಮಾತನಾಡಿ, ವಿಶ್ವ ಅಧಿಕ ರಕ್ತದೊತ್ತಡ ದಿನದ ಧ್ಯೇಯವಾಕ್ಯ ಒಟ್ಟಿಗೆ ಅಧಿಕ ರಕ್ತದೊತ್ತಡವನ್ನು ನಿಯಂತ್ರಿಸುವುದು ಮತ್ತು ನಿಮ್ಮ ರಕ್ತದೊತ್ತಡವನ್ನು ನಿಯಮಿತವಾಗಿ ಪರಿಶೀಲಿಸಿ, ಮೌನಿ ಹಂತಕನನ್ನು ಸೋಲಿಸಿ ಎಂಬುದಾಗಿದೆ. ಅಧಿಕ ರಕ್ತದೊತ್ತಡವನ್ನು ನಿರ್ವಹಿಸುವುದು ಸಾಮೂಹಿಕ ಜವಾಬ್ದಾರಿಯಾಗಿದೆ. ಆರಂಭಿಕ ಪತ್ತೆಗೆ ನಿಯಮಿತ ರಕ್ತದೊತ್ತಡ ಮೇಲ್ವಿಚಾರಣೆ ಅತ್ಯಗತ್ಯ ಎಂದರು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಉಪ ನಿರ್ದೇಶಕರಾದ ಡಾ. ಸುಮನ, ಉಪ ವೈದ್ಯಕೀಯ ಅಧೀಕ್ಷಕರಾದ ಡಾ.




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಡೆದ ವಿಶ್ವ ಅಧಿಕ ರಕ್ತದೊತ್ತಡ ದಿನಾಚರಣೆ ಕಾರ್ಯಕ್ರಮವನ್ನು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಕೆ.ಎಸ್. ಸದಾನಂದರವರು ಉದ್ಘಾಟಿಸಿದರು. ಚಿತ್ರದಲ್ಲಿ ಡಾ. ಎಂ.ಸಿ. ಪ್ರಸಾದ್, ಡಾ. ಕೆ.ಎಂ. ಶ್ರೀನಾಥ್, ಡಾ. ಎಂ. ಸುರೇಶ್ ಬಾಬು, ಡಾ. ಸಿ.ಪಿ. ಮಧು, ಡಾ. ವೈ.ಎಸ್. ರವಿಕುಮಾರ್, ಡಾ. ಸುಮನ ಮೊದಲಾದವರುಗಳಿದ್ದಾರೆ. (17 ಮೇ 2026)

ಎಂ.ಸಿ. ಪ್ರಸಾದ್, ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಸುರೇಶಬಾಬು, ಪ್ರಾಧ್ಯಾಪಕರಾದ ಡಾ. ವೈ.ಎಸ್. ರವಿಕುಮಾರ್ ಹಾಗೂ ಮೆಡಿಸನ್ ವಿಭಾಗದ ವೈದ್ಯರುಗಳು, ವೈದ್ಯಕೀಯ ವಿದ್ಯಾರ್ಥಿಗಳು, ನರ್ಸಿಂಗ್ ವಿದ್ಯಾರ್ಥಿಗಳು ಮತ್ತು ಇನ್ನಿತರರು ಹಾಜರಿದ್ದರು.

## ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸಮಗ್ರ ಲೂಪಸ್ ಕ್ಲಿನಿಕ್ ಉದ್ಘಾಟನೆ

**ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ** ದಿನಾಂಕ 15.5.2026 ರಂದು ನಡೆದ ವಿಶ್ವ ಲೂಪಸ್ ದಿನಾಚರಣೆ ಮತ್ತು ಮೈಸೂರಿನಲ್ಲಿ ಮೊದಲ ಬಾರಿಗೆ ಲೂಪಸ್ ಕ್ಲಿನಿಕ್ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಪ್ರತಿ ವರ್ಷ ಮೇ 10ರಂದು ಜಾಗತಿಕವಾಗಿ ವಿಶ್ವ ಲೂಪಸ್ ದಿನವನ್ನು ಆಚರಿಸಲಾಗುತ್ತಿದೆ. ದೇಹದ ಪ್ರತಿರಕ್ಷಣಾ ವ್ಯವಸ್ಥೆಯು ತನ್ನದೇ ಆದ ಆರೋಗ್ಯಕರ ಅಂಗಾಂಶಗಳ ಮೇಲೆ ಪರಿಣಾಮ ಬೀರುವ ಸಂಕೀರ್ಣ ಸ್ವಯಂ ನಿರೋಧಕ ಕಾಯಿಲೆಯಾದ ಲೂಪಸ್ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. ಲೂಪಸ್ ದೀರ್ಘಕಾಲದ ಕಾಯಿಲೆಯಾಗಿದ್ದು ಇದು ಚರ್ಮ, ಕೀಲುಗಳು, ಮೂತ್ರಪಿಂಡಗಳು, ಹೃದಯ ಮತ್ತು ಮೆದುಳು ಸೇರಿದಂತೆ ದೇಹದ ಪ್ರಮುಖ ಅಂಗಗಳ ಮೇಲೆ ಪರಿಣಾಮ ಬೀರಬಹುದು. ಇದನ್ನು ಮನಗಂಡು ಜೆಎಸ್‌ಎಸ್ ಆಸ್ಪತ್ರೆಯ ಚರ್ಮರೋಗ, ನೆಫ್ರಾಲಜಿ ಹಾಗೂ ಕ್ಲಿನಿಕಲ್ ಇಮ್ಯುನೊಲಾಜಿ ಮತ್ತು ರುಮಟಾಲಜಿ ವಿಭಾಗಗಳು ಸೇರಿ ಲೂಪಸ್ ರೋಗಿಗಳ ಚಿಕಿತ್ಸೆಗಾಗಿ ಮೈಸೂರಿನಲ್ಲಿ ಮೊದಲ ಬಾರಿಗೆ ಸಮಗ್ರ ಲೂಪಸ್ ಕ್ಲಿನಿಕ್ ಅನ್ನು ಪ್ರಾರಂಭಿಸಲಾಗಿದೆ. ಈ ಕ್ಲಿನಿಕ್ ಲೂಪಸ್




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ವಿಶ್ವ ಲೂಪಸ್ ದಿನಾಚರಣೆ ಮತ್ತು ಲೂಪಸ್ ಕ್ಲಿನಿಕ್ ಉದ್ಘಾಟನೆಯನ್ನು ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ.ಮಧುರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಡಾ. ಶಾಂತಮಲ್ಲಪ್ಪ, ಡಾ. ಎಂ.ಸಿ. ಪ್ರಸಾದ್ ಡಾ. ಡಿ. ನಾರಾಯಣಪ್ಪ, ಡಾ. ಎಸ್. ವೀರಣ್ಣ, ಡಾ. ಮಹಾಬಲೇಶ್, ಡಾ. ಶಿವಪ್ರಸಾದ್, ಡಾ. ಸುಬ್ರಮಣಿಯನ್ ಮೊದಲಾದವರುಗಳಿದ್ದಾರೆ. (15 ಮೇ 2026)

ರೋಗಿಗಳಿಗೆ ಒಂದೇ ಸೂರಿನಡಿ ಸುಧಾರಿತ ಚಿಕಿತ್ಸೆ ಮತ್ತು ಸಮಗ್ರ ಆರೈಕೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ. ಜೆಎಸ್‌ಎಸ್ ಆಸ್ಪತ್ರೆಗೆ ಚಿಕಿತ್ಸೆಗೆ ಬರುವ ಲೂಪಸ್ ಹೊರರೋಗಿಗಳ ರಕ್ತ ಪರೀಕ್ಷೆಗಳಿಗೆ ಶೇ10% ರಿಯಾಯಿತಿ ಹಾಗೂ ಒಳರೋಗಿಗಳ ಚಿಕಿತ್ಸೆಗಾಗಿ ಶೇ5% ರಿಯಾಯಿತಿಯನ್ನು ನೀಡಲಾಗುತ್ತಿದೆ ಎಂದರು.

ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಡಿ. ನಾರಾಯಣಪ್ಪರವರು ಮಾತನಾಡಿ, ಲೂಪಸ್ ಕಾಯಿಲೆಯು ಎಲ್ಲಾ ವಯೋಮಾನದವರೆಗೂ ಬರಬಹುದು. ಇದರ ಲಕ್ಷಣಗಳು ಕೀಲು ನೋವು, ಚರ್ಮದ ದದ್ದುಗಳು, ಜ್ವರ, ಕೂದಲು ಉದುರುವಿಕೆ, ಬಾಯಿ ಹುಣ್ಣುಗಳು ಮತ್ತು ತೀವ್ರ ಆಯಾಸದಿಂದ ಕೂಡಿರಬಹುದು. ಆರಂಭಿಕ ರೋಗನಿರ್ಣಯ ಮತ್ತು ನಿಯಮಿತ ಚಿಕಿತ್ಸೆಯು ತೊಡಕುಗಳನ್ನು ತಡೆಗಟ್ಟಲು ಮತ್ತು ಜೀವನದ ಗುಣಮಟ್ಟವನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಸಕಾಲಿಕ ವೈದ್ಯಕೀಯ ಆರೈಕೆ ಮತ್ತು ಚಿಕಿತ್ಸೆಯಿಂದ ಇದನ್ನು ತಡೆಗಟ್ಟಬಹುದು. ಆಸ್ಪತ್ರೆಯ ಸಂಧಿವಾತ ವಿಭಾಗವು ಬೋಧನೆ ಮತ್ತು ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ವೈದ್ಯರುಗಳು ಎಲ್ಲಾ ರೋಗಿಗಳಿಗೆ ಗುಣಮಟ್ಟದ ಆರೈಕೆಯನ್ನು ಒದಗಿಸಲು ಶ್ರಮಿಸುತ್ತಿದ್ದಾರೆ. ಸಂಧಿವಾತ ಸಮಸ್ಯೆಗಳಿಗೆ ಸಮಗ್ರ ಆರೈಕೆಯನ್ನು ನೀಡಲು ವಿಶಾಲವಾದ ಕೊಠಡಿ ಮತ್ತು ಅತ್ಯಾಧುನಿಕ ಉಪಕರಣಗಳೊಂದಿಗೆ ನುರಿತ ವೈದ್ಯರ ತಂಡ ಸಿದ್ಧವಾಗಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಧಿವಾತ ವಿಭಾಗದ ಮುಖ್ಯಸ್ಥರಾದ ಡಾ. ಆರ್. ಸುಬ್ರಮಣಿಯನ್, ಚರ್ಮರೋಗ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ವೀರಣ್ಣ, ನೆಫ್ರೋಲಜಿ ವಿಭಾಗದ ಮುಖ್ಯಸ್ಥರಾದ ಡಾ. ಮಂಜುನಾಥ್ ಎಸ್ ಶೆಟ್ಟಿ ಪ್ರಾಧ್ಯಾಪಕರುಗಳಾದ ಡಾ. ಶಿವಪ್ರಸಾದ್, ಡಾ. ಮಹಾಬಲೇಶ್‌ರವರುಗಳು ಉಪಸ್ಥಿತರಿದ್ದರು.

# ಬಿಳಿ ಉಡುಪಿನಲ್ಲಿ ಅಡಗಿರುವುದು ಮಾನವೀಯತೆ



ಮೈಸೂರಿನ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್, ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಹಾಗೂ ಜೆಎಸ್‌ಎಸ್ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ನಡೆದ 'ನಶಾಮುಕ್ತಾ ಮೈಸೂರು' ಪರಿಕಲ್ಪನೆಯ ಮ್ಯಾರಥಾನನ್ನು ಶ್ರೀ ಮಲ್ಲಿಕಾರ್ಜುನ ಬಾಲದಂಡಿಯವರು ಉದ್ಘಾಟಿಸುತ್ತಿರುವುದು. (12 ಮೇ 2026)

**ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್, ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಹಾಗೂ ಜೆಎಸ್‌ಎಸ್ ಆಸ್ಪತ್ರೆ** ಇವರುಗಳ ಸಂಯುಕ್ತಾಶ್ರಯದಲ್ಲಿ 'ನಶಾಮುಕ್ತಾ ಮೈಸೂರು' ಎಂಬ ಪರಿಕಲ್ಪನೆಯೊಂದಿಗೆ ದಿನಾಂಕ 12.5.2026ರಂದು ಮ್ಯಾರಥಾನ್‌ಅನ್ನು ಆಯೋಜಿಸಲಾಗಿತ್ತು. ಮೈಸೂರಿನ ಅರಮನೆಯ ಎದುರಿಗಿರುವ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಮುಖ್ಯ ಅತಿಥಿಗಳಿಂದ ಹಸಿರು ನಿಶಾನೆಯ ಮೂಲಕ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಮಲ್ಲಿಕಾರ್ಜುನ ಬಾಳದಂಡಿಯವರು ಮಾತನಾಡಿ ಇಂದಿನ ಯುವಪೀಳಿಗೆಯು ಮಾದಕ ದ್ರವ್ಯ ವ್ಯಸನಕ್ಕೆ ಬಲಿಯಾಗುತ್ತಿರುವುದು ಬಹಳ ಬೇಸರವನ್ನುಂಟು ಮಾಡಿದೆ. ಇಂದಿನ ಸಮಾಜದಲ್ಲಿ ಅನೇಕರು ಒತ್ತಡ, ಸ್ನೇಹಿತರ ಪ್ರಭಾವ ಅಥವಾ ಕುತೂಹಲದಿಂದ ಮದ್ಯಪಾನ, ಗಾಂಜ, ಡ್ರಗ್ಸ್ ಮತ್ತು ಇತರ ವ್ಯಸನಗಳಿಗೆ ಒಳಗಾಗುತ್ತಿದ್ದಾರೆ. 'ನಶಾ ಮುಕ್ತ ಮೈಸೂರು' ಅಭಿಯಾನದ ಉದ್ದೇಶ ಜನರಲ್ಲಿ ಜಾಗೃತಿ ಮೂಡಿಸಿ ಆರೋಗ್ಯಕರ ಜೀವನ ಶೈಲಿಯನ್ನು ಉತ್ತೇಜಿಸುವುದಾಗಿದೆ ಎಂದು ತಿಳಿಸಿದರು.

ಗೌರವ ಅತಿಥಿಗಳಾಗಿ ಆಗಮಿಸಿದ್ದ ಜೆಎಸ್‌ಎಸ್ ಡೆಂಟಲ್ ಕಾಲೇಜು ಹಾಗೂ ಆಸ್ಪತ್ರೆಯ ಸಹ ಪ್ರಾಧ್ಯಾಪಕರು ಹಾಗೂ ಸೈಕ್ಲಿಂಗ್ ಸವಾರಿ ಹವ್ಯಾಸಿಗಳೂ ಆದ ಡಾ. ಬಿಂದು ಸುಹಾಸ್ ಗೋಧಿರವರು, ದೈಹಿಕ ಮತ್ತು ಮಾನಸಿಕ ಸದೃಢತೆ ಬಹಳ ಮುಖ್ಯ. ಇಂದಿನ ವೇಗದ ಜೀವನ ಶೈಲಿಯಲ್ಲಿ ಅನೇಕರು ಆರೋಗ್ಯದ

ಕಡೆ ಗಮನ ಕೊಡದೆ ಒತ್ತಡ, ಅಸ್ವಸ್ಥತೆ ಎದುರಿಸುತ್ತಿದ್ದಾರೆ. ಆಹಾರ ಪದ್ಧತಿ ಮತ್ತು ವ್ಯಾಯಾಮದ ಕೊರತೆಯಿಂದ ಹಲವು ರೋಗಗಳಿಗೆ ಒಳಗಾಗುತ್ತಿದ್ದಾರೆ. ಆದ್ದರಿಂದ ಪ್ರತಿಯೊಬ್ಬರು ಫಿಟ್ನೆಸ್ ಮತ್ತು ಆರೋಗ್ಯಕ್ಕೆ ಮಹತ್ವ ನೀಡಬೇಕೆಂದು ತಿಳಿಸಿದರು.

## ವಿಶ್ವ ಶುಶ್ರೂಷಕರ ದಿನಾಚರಣೆ

ಅಂತಾರಾಷ್ಟ್ರೀಯ ಶುಶ್ರೂಷ ದಿನಾಚರಣೆಯು ಮಾನವೀಯತೆ, ಸೇವಾ ಮನೋಭಾವ ಮತ್ತು ತ್ಯಾಗದ ಪ್ರತೀಕವಾಗಿರುವ ಶುಶ್ರೂಷಕರಿಗೆ ಸಮರ್ಪಿತವಾಗಿದೆ. ಶುಶ್ರೂಷಕರ ವೃತ್ತಿ ಕೇವಲ ಉದ್ಯೋಗವಲ್ಲ. ಅದು ಸೇವೆಯ ರೂಪವಾಗಿದೆ. ತಾಳ್ಮೆ, ದಯೆ, ಕರ್ತವ್ಯ ನಿಷ್ಠೆ ಮತ್ತು ಸಹಾನುಭೂತಿ ಶುಶ್ರೂಷಕರ ಮಹಾನ್ ಗುಣಗಳಾಗಿವೆ ಎಂದು ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಾದ ಶ್ರೀ ನಿತೇಶ್ ಪಾಟೀಲ್‌ರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್, ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಹಾಗೂ ಜೆಎಸ್‌ಎಸ್ ಆಸ್ಪತ್ರೆ ಇವರುಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ 12.5.2026 ರಂದು ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ನಡೆದ ವಿಶ್ವ ಶುಶ್ರೂಷಕರ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಶುಶ್ರೂಷಕರು ಆಸ್ಪತ್ರೆಯ ಹೃದಯವಾಗಿದ್ದಾರೆ. ರೋಗಿಯ ನೋವು, ಭಯ ಹಾಗೂ ಸಂಕಷ್ಟವನ್ನು ಅರ್ಥಮಾಡಿಕೊಂಡು, ದಿನ ರಾತ್ರಿ ಸೇವೆ ಸಲ್ಲಿಸುವ ಶುಶ್ರೂಷಕರು ನಿಜವಾದ ಸೇವಾಮೂರ್ತಿಗಳು ಎಂದರೆ ತಪ್ಪಾಗಲಾರದು. ಒಬ್ಬ ರೋಗಿಯು ಆಸ್ಪತ್ರೆಯಲ್ಲಿ ಇದ್ದಾಗ ಅವನಿಗೆ ತಾಯಿಯ ಮಮತೆ, ಸಹೋದರಿಯ ಕಾಳಜಿ ಮತ್ತು ಸ್ನೇಹಿತನ ಧೈರ್ಯವನ್ನು ನೀಡುವವರು ಶುಶ್ರೂಷಕರು. ವಿಶೇಷವಾಗಿ ಕೋವಿಡ್ ಮಹಾಮಾರಿಯ ಸಮಯದಲ್ಲಿ ಶುಶ್ರೂಷಕರ ಸೇವೆ ಅಪ್ರತಿಮವಾಗಿತ್ತು. ಎಲ್ಲರೂ ಮನೆಯೊಳಗೆ ಸುರಕ್ಷಿತವಾಗಿದ್ದಾಗ, ಶುಶ್ರೂಷಕರು ಆಸ್ಪತ್ರೆಯಲ್ಲಿ ನಿಂತು ಸಾವಿರಾರು ಜನರ ಜೀವ ಉಳಿಸಲು ಹೋರಾಡಿದರು. ಇಂದು ನರ್ಸಿಂಗ್ ಕ್ಷೇತ್ರದಲ್ಲಿ ಸಾವಿರಾರು ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಕಟ್ಟಿಕೊಳ್ಳುತ್ತಿದ್ದಾರೆ. ಅವರು ಕೇವಲ ವೃತ್ತಿಪರರಾಗಿ ಮಾತ್ರವಲ್ಲ, ಮಾನವೀಯ ಮೌಲ್ಯಗಳನ್ನು ಕಾಪಾಡುವ ಸೇವಕರಾಗಿ ಬೆಳೆಯಬೇಕು. ಜೆಎಸ್‌ಎಸ್ ಸಂಸ್ಥೆಯು ಉತ್ತಮ ಶಿಕ್ಷಣ ಹಾಗೂ ಆರೋಗ್ಯ ಸೇವೆಯಿಂದ ಉನ್ನತವಾದ ಹೆಸರನ್ನು ಗಳಿಸಿಕೊಂಡು ಇಂದು ಬೃಹದಾಕಾರದಲ್ಲಿ ಬೆಳೆದು ನಿಂತಿದೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಡಾ. ಮೃತ್ಯುಂಜಯಪ್ಪ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿಯಾದ ಶ್ರೀಮತಿ ಸುಧಾ ಮೃತ್ಯುಂಜಯಪ್ಪನವರು ಮಾತನಾಡುತ್ತ, ಶುಶ್ರೂಷಕರ ಸೇವೆ, ತ್ಯಾಗ ಹಾಗೂ ಸಮರ್ಪಣೆ ನಮ್ಮ ಸಮಾಜಕ್ಕೆ ಬೆಳಕಾಗಿದೆ, ನೀವು ಸಮಾಜದ ಆರೋಗ್ಯ ರಕ್ಷಕರು ಮಾನವೀಯತೆಯ ನಿಜವಾದ ಪ್ರತಿರೂಪಗಳು. ಇಂದು ಜೆಎಸ್‌ಎಸ್ ಸಂಸ್ಥೆಯು ಆಕಾಶದೆತ್ತರಕ್ಕೆ ಬೆಳೆಯಲು ಶ್ರೀ ರಾಜೇಂದ್ರ ಮಹಾಸ್ವಾಮಿಗಳವರ ಕೊಡುಗೆ ಹಾಗೂ ಪ್ರಸ್ತುತ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದೂರದರ್ಶಿತ್ವ ಕಾರಣವಾಗಿದೆ. ತಮ್ಮ ನಿಸ್ವಾರ್ಥ ಸೇವೆ, ರೋಗಿಗಳಿಗೆ ಮಾನಸಿಕ ಬೆಂಬಲವನ್ನು ನೀಡಿ, ಇನ್ನಿತರ ಶುಶ್ರೂಷಕರಿಗೆ ಮಾದರಿಯಾಗಿ ಇಂದು ಡಾ. ಮೃತ್ಯುಂಜಯಪ್ಪ, ಟ್ರಸ್ಟ್‌ನ ವತಿಯಿಂದ 'ಅತ್ಯುತ್ತಮ ಶುಶ್ರೂಷಕ' ಪ್ರಶಸ್ತಿಯನ್ನು

ಸ್ವೀಕರಿಸಿದ ಎಲ್ಲಾ ಶುಶ್ರೂಷಕರಿಗೂ ಅಭಿನಂದನೆಗಳು ಎಂದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಮಾತನಾಡುತ್ತಾ, ಶುಶ್ರೂಷಕರ ಸೇವೆಯನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅವರ ತ್ಯಾಗ ಮತ್ತು ಸಮರ್ಪಣಾ ಭಾವವೂ ಬೇರೆ ಯಾವ ಕ್ಷೇತ್ರಕ್ಕೂ ಹೋಲಿಕೆ ಮಾಡಲು ಸಾಧ್ಯವಾಗುವುದಿಲ್ಲ. ಎಲೆಮರೆ ಕಾಯಿಯಂತೆ ಸದಾ ರೋಗಿಗಳ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಾ ಇಂದು ಸಂಸ್ಥೆಗೆ ಉತ್ತಮವಾದ ಹೆಸರು ತಂದಿದ್ದಾರೆ ಎಂದರು.

ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು ಮಾತನಾಡಿ ಶುಶ್ರೂಷಕರ ಸೇವೆ ನಿಸ್ವಾರ್ಥವಾದುದು. ಎಷ್ಟೇ ಒತ್ತಡ ಹಾಗೂ ಸವಾಲುಗಳಿದ್ದರೂ ಶುಶ್ರೂಷಕರ ಸಹನ ಶೀಲತೆ ಮತ್ತು ನಿಷ್ಠೆ ಸಮಾಜಕ್ಕೆ ಆದರ್ಶವಾಗಿದೆ. ಆರೋಗ್ಯವೇ ಭಾಗ್ಯ ಎಂಬ ಮಾತಿನಂತೆ ಶುಶ್ರೂಷಕರು ಕೋವಿಡ್ ಸಮಯದಲ್ಲಿ ನೀಡಿದ ಹಾರೈಕೆ ಎಂದೂ ಮರೆಯಲಾಗುವುದಿಲ್ಲ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಮಾತನಾಡಿ, ಪ್ರಸ್ತುತ ವಿದ್ಯಮಾನದ ಪ್ರಕಾರ ಶುಶ್ರೂಷಕರ ಸಂಖ್ಯೆಯು ಬಹಳ ಇಳಿಮುಖವಾಗಿದ್ದು, ಆಸ್ಪತ್ರೆಗಳಲ್ಲೂ ಶುಶ್ರೂಷಕರ ಕೊರತೆ ಕಾಣಿಸುತ್ತಿದೆ. ಪ್ರತೀ ವರ್ಷವೂ ಲಕ್ಷಾಂತರ ನರ್ಸಿಂಗ್ ವಿದ್ಯಾರ್ಥಿಗಳು ಹೊರಬಂದರು ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ 2030ರ ವೇಳೆಗೆ ಭಾರಿ ಕೊರತೆಯುಂಟಾಗಲಿದೆ. ಕೌಶಲ್ಯ ಪೂರ್ಣ ಶುಶ್ರೂಷಕರಿಗೆ ವಿದೇಶಗಳಲ್ಲಿ ಬೇಡಿಕೆ ಹೆಚ್ಚಾಗುತ್ತಿದೆ. ವಿಶೇಷವಾಗಿ ಭಾರತೀಯ ನರ್ಸ್‌ಗಳು ತಮ್ಮ ಪರಿಶ್ರಮ, ಶಿಸ್ತು, ಸಹಾನೂಭೂತಿ ಮತ್ತು ಕರ್ತವ್ಯ ನಿಷ್ಠೆಯಿಂದ ವಿಶ್ವದಾದ್ಯಂತ ಉತ್ತಮ ಹೆಸರು ಗಳಿಸಿದ್ದಾರೆ. ಇದು ನಮ್ಮ ದೇಶದ ನರ್ಸಿಂಗ್ ಶಿಕ್ಷಣ ಮತ್ತು ಸೇವಾ ಗುಣಮಟ್ಟಕ್ಕೂ ದೊರೆಯುತ್ತಿರುವ ಮಾನ್ಯತೆ ಎಂದು ತಿಳಿಸಿದರು.

ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿರವರು, ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಶ್ರೀಮತಿ ಎಂ.ಕೆ. ಅಶ್ವತಿದೇವಿರವರು, ಜೆಎಸ್‌ಎಸ್ ಆಸ್ಪತ್ರೆಯ ಶುಶ್ರೂಷ ಸೇವೆಯ ಮುಖ್ಯ ಅಧಿಕಾರಿಗಳಾದ ಶ್ರೀಮತಿ ಜನೆಟ್ ಮತಾಯಸ್‌ರವರು, ಆಸ್ಪತ್ರೆಯ ಶುಶ್ರೂಷಕರು, ಬೋಧಕ ಹಾಗು ಬೋಧಕೇತರ ವರ್ಗದವರು ಹಾಗು ಮೈಸೂರಿನ ಹಲವು ಶಾಲೆ ಮತ್ತು ಕಾಲೇಜಿನ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಮ್ಯಾರಥಾನ್‌ನಲ್ಲಿ ವಿಜೇತರಾದ 10 ಸ್ಪರ್ಧಿಗಳಿಗೆ ನಗದು ಬಹುಮಾನವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಆರು ಮಂದಿ ಶುಶ್ರೂಷಕರಿಗೆ ಅತ್ಯುತ್ತಮ ಶುಶ್ರೂಷ ಸೇವಾ ಪ್ರಶಸ್ತಿಯನ್ನು ಕೊಟ್ಟು ಗೌರವಿಸಲಾಯಿತು. ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ಬೋಧಕರಾದ ಶ್ರೀಮತಿ ಎಸ್. ನೀತಾಡಳ್ಳಿರವರು ಸ್ವಾಗತಿಸಿದರು. ಸೂಪರ್‌ವೈಸರಾದ ಶ್ರೀ ಗಿರೀಶ್‌ರವರು ವಂದಿಸಿದರು. ಸಹಾಯ ಪ್ರಾಧ್ಯಾಪಕರಾದ ಶ್ರೀ ಸುನೀಲ್ ಕಾರ್ಯಕ್ರಮವನ್ನು ನಿರೂಪಿಸಿದರು.

# ಯೋಗದಿಂದ ಸಮತೋಲನದ ಜೀವನ




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಯೋಗ ಕುರಿತ ವಿಶೇಷ ಉಪನ್ಯಾಸವನ್ನು ಡಾ. ಯೋಗಿನಿ ಕಾಳೀಜಿಯವರು ಉದ್ಘಾಟಿಸುತ್ತಿರುವುದು. (29 ಮೇ 2026)

ಯೋಗವು ಕೇವಲ ದೈಹಿಕ ವ್ಯಾಯಾಮವಲ್ಲ. ಅದು ಮನಸ್ಸಿನ ವ್ಯಾಯಾಮವೂ ಆಗಿದೆ. ಇಂದಿನ ತಂತ್ರಜ್ಞಾನದ ಯುಗದಲ್ಲಿ ಯೋಗ ಮತ್ತು ಧ್ಯಾನದಂತಹ ಅಭ್ಯಾಸಗಳು ಮನಶಾಂತಿಯನ್ನು ಬೆಳೆಸಿಕೊಳ್ಳುವುದಕ್ಕೆ ಮತ್ತು ಉನ್ನತ ಗುಣಮಟ್ಟದ ಜೀವನವನ್ನು ನಡೆಸುವುದಕ್ಕೆ ಹೆಚ್ಚು ಸಹಕಾರಿಯಾಗಿದೆ. ಸಮತೋಲನದ ಜೀವನಕ್ಕಾಗಿ ಯೋಗ ಇಂದು ತೀರ ಅವಶ್ಯವಾಗಿದೆ ಎಂದು ಅಂತಾರಾಷ್ಟ್ರೀಯ ಖ್ಯಾತಿಯ ಯೋಗಿನಿ, ತ್ರಿಯೋಗದ ಸಂಸ್ಥಾಪಕಿ ಹಾಗೂ ವ್ಯಾಸ ಭಾರತೀ ತ್ರಿಯೋಗ ವಿಶ್ವವಿದ್ಯಾಲಯದ ಕುಲಪತಿ ಡಾ. ಯೋಗಿನಿ ಕಾಳೀಜಿಯವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ದಿನಾಂಕ 29.5.2026ರಂದು ಯೋಗ ಕುರಿತು ಅವರು ಉಪನ್ಯಾಸ ನೀಡಿದರು. ಮಾನವನ ಮನಸ್ಸು ಕೋಪ, ದುರಾಸೆ, ಅಸೂಯೆ, ಬಾಂಧವ್ಯ, ಅಹಂಕಾರ ಮತ್ತು ದ್ವೇಷದಂತಹ ಆರು ಆಂತರಿಕ ಶತ್ರುಗಳಿಂದ ಪ್ರಭಾವಿತವಾಗಿರುತ್ತದೆ. ನಿಯಮಿತ ಯೋಗಾಭ್ಯಾಸವು ಈ ನಕಾರಾತ್ಮಕ ಪ್ರವೃತ್ತಿಗಳನ್ನು ನಿವಾರಿಸಿ ಧೈರ್ಯ, ಸಕಾರಾತ್ಮಕತೆ, ಏಕಾಗ್ರತೆ ಹಾಗೂ ಭಾವನಾತ್ಮಕ ಸ್ಥಿರತೆಯನ್ನು ಅಭಿವೃದ್ಧಿಪಡಿಸಲು ಸಹಕಾರಿಯಾಗಿದೆ. ನಿಜವಾದ ಕಲಿಕೆ ಎಂದರೆ ಕೇವಲ ಮೆದುಳಿಗೆ ಮಾಹಿತಿಯನ್ನು ತುಂಬುವುದಲ್ಲ. ದೇಹ, ಮನಸ್ಸು ಮತ್ತು ಆಂತರಿಕ ಚೈತನ್ಯವನ್ನು ಪೋಷಿಸುವುದೂ ಆಗಿದೆ. ಆರೋಗ್ಯಕರ ಮೆದುಳನ್ನು ಕಾಪಾಡಿಕೊಳ್ಳಲು ಸರಿಯಾದ ಉಸಿರಾಟ, ಶಿಸ್ತು, ಸಮತೋಲಿತ ಜೀವನ ಹಾಗೂ ಆಂತರಿಕ ಅರಿವು ಅತ್ಯಗತ್ಯವಾಗಿವೆ. ಕಲಿಕೆಯು ಜೀವಮಾನಪೂರ್ತಿ ನಡೆಯುವ ಪ್ರಕ್ರಿಯೆಯಾಗಿದ್ದು,

ನಿಜವಾದ ಜ್ಞಾನವು ಶಿಕ್ಷಣ ಮತ್ತು ಆಂತರಿಕ ಸಾಕ್ಷಾತ್ಕಾರ ಎರಡರಲ್ಲಿಯೂ ಅಡಕವಾಗಿದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ವೇದಕಾಲದಿಂದಲೂ ಯೋಗಕ್ಕೆ ಹೆಚ್ಚು ಮಹತ್ವವಿದೆ ಹಾಗೂ ಅದು ಅಧ್ಯಾತ್ಮದ ಸಂಕೇತವಾಗಿದೆ. ಯೋಗವು ಜೀವಾತ್ಮ, ಪರಮಾತ್ಮ ಕ್ರಿಯಾತ್ಮಕವಾಗಿರಲು ಸಹಾಯಕವಾಗಿದೆ. 21ನೇ ಶತಮಾನ ಹೆಚ್ಚು ಸಂಕೀರ್ಣ ಮತ್ತು ಸವಾಲಿನ ಕಾಲವಾಗಿದೆ. ಇದಕ್ಕೆ ಪರಿಹಾರವೆಂದರೆ ಯೋಗಾಭ್ಯಾಸ. ಯೋಗದಿಂದ ಸ್ವನಿಯಂತ್ರಣ, ಮನಸ್ಸಿನ ಶಾಂತಿ, ಕುಟುಂಬಗಳ ನಡುವೆ ಸಾಮರಸ್ಯ ಸಾಧಿಸಬಹುದು. ಯೋಗ ದೇಹ ಮತ್ತು ಮನಸ್ಸಿನ ನಡುವೆ ಸಮತೋಲನದ ಸಂಪರ್ಕವನ್ನು ಸಾಧ್ಯವಾಗಿಸುತ್ತದೆ ಎಂದರು.

ಅಮೇರಿಕಾದ ವ್ಯಾಸ ಭಾರತೀ ತ್ರಿಯೋಗ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ಕೆ. ರಾಘವೇಂದ್ರಪೈರವರು ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ಯೋಗ ಮತ್ತು ಆಯುರ್ವೇದ ಒಂದೇ ನಾಣ್ಯದ ಎರಡು ಮುಖಗಳು. ಯೋಗದ ಮುದ್ರೆಗೂ ಮನಸ್ಸಿಗೂ ಸಂಪರ್ಕವಿದೆ. ಅದನ್ನು ಸಾಧಿಸುವ ಸಾಮರ್ಥ್ಯ ಎಲ್ಲರಲ್ಲಿಯೂ ಇದೆ. ಯಾರು ವ್ಯರ್ಥರಲ್ಲ. ಅದಕ್ಕೆ ಕ್ರಮವಾದ ಮತ್ತು ನಿರಂತರವಾದ ಅಭ್ಯಾಸ ಬೇಕು. ಯೋಗದಿಂದ ಪ್ರತಿಕ್ಷಣ ಆನಂದ ಮತ್ತು ಶಾಂತಿಯನ್ನು ಪಡೆಯಬಹುದು. ಭಾರತೀಯ ಸಾಂಸ್ಕೃತಿಕ ಆಚಾರ ವಿಚಾರಗಳು ದೇಹದ ಆರೋಗ್ಯಕ್ಕೆ ಪರೋಕ್ಷವಾಗಿ ಸಹಾಯಕವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಉಪಸ್ಥಿತರಿದ್ದರು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸ್ವಾಗತಿಸಿದರು. ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ವಂದಿಸಿದರು. ಡಾ. ಎಸ್. ರಾಜೇಂದ್ರ ಪ್ರಸಾದ್‌ರವರು ನಿರೂಪಿಸಿದರು. ವಿದ್ಯಾರ್ಥಿನಿ ಕು. ಅಂಕಿತ ಕುಲಕರ್ಣಿ ಪ್ರಾರ್ಥಿಸಿದರು.

## ನವಜಾತ ಶಿಶುಗಳ ಪುನರುಜ್ಜೀವನ ಕಾರ್ಯಾಗಾರ

ನವಜಾತ ಶಿಶು ಜನನದ ನಂತರ ಅದರ ಉಸಿರಾಟ, ಹೃದಯ ಬಡಿತ ಮತ್ತು ದೈಹಿಕ ಸ್ಥಿತಿಯನ್ನು ಸರಿಯಾಗಿ ಕಾಪಾಡುವುದು ಅತ್ಯಂತ ಮುಖ್ಯವಾಗಿದೆ. ಪ್ರತೀ ಕ್ಷಣವೂ ಅಮೂಲ್ಯವಾಗಿರುವ ಈ ಪರಿಸ್ಥಿತಿಯಲ್ಲಿ ಸರಿಯಾದ ಸಮಯದಲ್ಲಿ ನೀಡುವ ಆರೈಕೆ ಅನೇಕ ನವಜಾತ ಶಿಶುಗಳ ಜೀವ ಉಳಿಸಲು ಸಹಕಾರಿಯಾಗುತ್ತದೆ ಎಂದು ಜೆಎಸ್‌ಎಸ್ ಎಚ್‌ಇಆರ್‌ನ ಸಿಮ್ಯುಲೇಷನ್ ಲ್ಯಾಬ್‌ನ ಅಸೋಸಿಯೇಟ್ ಪ್ರೊಫೆಸರ್ ಮತ್ತು ಮುಖ್ಯ ಸಂಚಲನಾಧಿಕಾರಿಗಳಾದ ಡಾ. ಎಸ್. ಅರ್ಚನರವರು ತಿಳಿಸಿದರು. **ಮೈಸೂರಿನ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್** ವತಿಯಿಂದ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ದಿನಾಂಕ 26.05.2026 ರಂದು ಜೆಎಸ್‌ಎಸ್ ಎಚ್‌ಇಆರ್‌ನ ಸಿಮ್ಯುಲೇಷನ್ ಲ್ಯಾಬ್‌ನಲ್ಲಿ "ಗೋಲ್ಡನ್ ಮಿನಿಟ್ ಕೇರ್ ನವಜಾತ ಶಿಶು ಪುನರುಜ್ಜೀವನ ಕೌಶಲ್ಯಗಳ ಕುರಿತು ಹ್ಯಾಂಡ್ಸ್ ಆನ್ ತರಬೇತಿ" ಎಂಬ ವಿಷಯದ ಬಗ್ಗೆ ನಡೆದ ಕಾರ್ಯಾಗಾರವನ್ನು ಉದ್ದೇಶಿಸಿ ಅವರು ಮಾತನಾಡಿದರು. ನರ್ಸಿಂಗ್ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು



ಆರೋಗ್ಯ ಸೇವಾ ವ್ಯವಸ್ಥೆಯ ಬೆನ್ನೆಲುಬಾಗಿದ್ದಾರೆ. ತಮ್ಮ ಶಿಕ್ಷಣದ ಆರಂಭದಿಂದಲೇ ಅವರು ಸೇವಾ ಮನೋಭಾವ, ಕರುಣೆ ಮತ್ತು ಜವಾಬ್ದಾರಿಯೊಂದಿಗೆ ರೋಗಿಗಳ ಆರೈಕೆಯನ್ನು ಕಲಿಯುತ್ತಾರೆ. ಆಸ್ಪತ್ರೆಗಳಲ್ಲಿ ದಿನದ 24 ಗಂಟೆ ಸೇವೆ ಸಲ್ಲಿಸುತ್ತ ರೋಗಿಗಳ ಆರೈಕೆ, ಸುರಕ್ಷತೆ ಮತ್ತು ಚಿಕಿತ್ಸೆಗಾಗಿ ಶ್ರಮಿಸುತ್ತಾರೆ. ಆರೋಗ್ಯ ಸೇವೆಯಲ್ಲಿ ನವಜಾತ ಶಿಶುವಿನ ಆರೈಕೆ ಅತ್ಯಂತ ಮಹತ್ವದ್ದಾಗಿದ್ದು, ಮಗುವಿನ ಜನನದ ನಂತರ ಮೊದಲ ಕೆಲವು ನಿಮಿಷಗಳು ಜೀವನದಲ್ಲಿ ಬಹಳ ಸೂಕ್ಷ್ಮ ಹಾಗೂ ಅಮೂಲ್ಯವಾದ ಸಮಯವಾಗಿರುತ್ತದೆ. ಈ ಅವಧಿಯಲ್ಲಿ ಸರಿಯಾದ ಆರೈಕೆ ದೊರೆತರೆ ಅನೇಕ ಶಿಶುಗಳ ಜೀವನವನ್ನು ಉಳಿಸಬಹುದು. ಇಂದಿನ ಕಾರ್ಯಾಗಾರವನ್ನು ಮುಖ್ಯವಾಗಿ ನಿಮ್ಮನ್ನು ಕೌಶಲ್ಯಪೂರ್ಣ ಹಾಗೂ ಸಮರ್ಥ ಶುಶ್ರೂಷಕರಾಗಿ ರೂಪಿಸುವ ಉದ್ದೇಶದಿಂದ ಆಯೋಜಿಸಲಾಗಿದೆ. ಭವಿಷ್ಯದಲ್ಲಿ ನೀವು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಅಥವಾ ಸೌಲಭ್ಯಗಳು ಕಡಿಮೆ ಇರುವ ದೂರದ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಬೇಕಾಗಬಹುದು. ಅಂತಹ ಸಂದರ್ಭಗಳಲ್ಲಿ ನಿಮ್ಮ ಜ್ಞಾನ, ಕೌಶಲ್ಯ, ತ್ವರಿತ ನಿರ್ಧಾರ ಮತ್ತು ಆತ್ಮವಿಶ್ವಾಸವೇ ನವಜಾತ ಶಿಶುವಿನ ಜೀವ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಶಿಶುಗಳ ಆರೈಕೆಯಲ್ಲಿ ಯಾವುದೇ ತುರ್ತು ಪರಿಸ್ಥಿತಿ ಎದುರಾದಾಗ ಅದನ್ನು ಸಮರ್ಥವಾಗಿ ನಿರ್ವಹಿಸಲು ನೀವು ಸದಾ ಸಿದ್ಧರಾಗಿರಬೇಕು. ಇದರಿಂದ ಶಿಶುಗಳಲ್ಲಿ ಉಂಟಾಗುವ ಗಂಭೀರ ಸಮಸ್ಯೆಗಳಾದ ಹೈಪೋಕ್ಸಿಯಾವನ್ನು ತಡೆಗಟ್ಟಿ ನವಜಾತ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್‌ನ ಮಕ್ಕಳ ವಿಭಾಗದ ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಕೆ. ಅಂಬಿಕರವರು ಮಾತನಾಡುತ್ತಾ, ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆ ಭವಿಷ್ಯದಲ್ಲಿ ಅವರ ಸಮರ್ಥ ಹಾಗೂ ಜವಾಬ್ದಾರಿಯುತ ಆರೋಗ್ಯ ವೃತ್ತಿಪರರಾಗುವ ವಿಶ್ವಾಸವನ್ನು ಮೂಡಿಸಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ನರ್ಸಿಂಗ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿರವರು ಮಾತನಾಡಿ, ಶ್ರದ್ಧೆಯಿಂದ ಕೇಳುವುದು, ಸೂಕ್ಷ್ಮವಾಗಿ ಆಲೋಚಿಸುವುದು ಮತ್ತು ಕಲಿತ ಕೌಶಲ್ಯಗಳನ್ನು ನಿರಂತರ ಅಭ್ಯಾಸ ಮಾಡುವುದು ಯಶಸ್ಸಿನ ಮೂಲ ಮಂತ್ರವಾಗಿದೆ. ನೀವು ಕಲಿಯುವ ಕೌಶಲ್ಯವು ಭವಿಷ್ಯದಲ್ಲಿ ಹಲವರ ಜೀವ ಉಳಿಸಲು ಸಹಕಾರಿಯಾಗಬಹುದು. ಆದ್ದರಿಂದ ಪ್ರತಿಯೊಂದು ತರಬೇತಿಯನ್ನು ಗಂಭೀರವಾಗಿ ಸ್ವೀಕರಿಸಿ ನಿರಂತರ ಅಭ್ಯಾಸದ ಮೂಲಕ ನಿಮ್ಮನ್ನು ನೀವು ಪರಿಪೂರ್ಣರನ್ನಾಗಿ ರೂಪಿಸಿಕೊಳ್ಳಬೇಕೆಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್‌ನ ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಕೆ. ಮುನಿರತ್ನಮ್ಮರವರು ಹಾಗೂ ಮಕ್ಕಳ ವಿಭಾಗದ ಉಪನ್ಯಾಸಕರಾದ ಶ್ರೀಮತಿ ಆರ್. ಕವಿತಾರವರು ನವಜಾತ ಶಿಶು ಪೋಷಣೆಯ ವಿಷಯದ ಕುರಿತು ಕೌಶಲ್ಯಗಳನ್ನು ಪ್ರಾತ್ಯಕ್ಷಿತೆಯ ಮೂಲಕ ವಿವರವಾಗಿ ಪ್ರದರ್ಶಿಸಿದರು. ಶ್ರೀಮತಿ ಹೆಚ್.ಎಸ್. ಮಾನಸರವರು ಸ್ವಾಗತಿಸಿದರು ಹಾಗೂ ಶ್ರೀ ಪುನೀತ್‌ರವರು ವಂದಿಸಿದರು. ಶ್ರೀಮತಿ ಎಸ್. ನೀತಾಡಳ್ವಿರವರು ನಿರೂಪಿಸಿದರು. □

## ಬಾಳೆ ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ಉದ್ಯಮಶೀಲತೆ

**ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ,** ನಂಜನಗೂಡು ತಾಲ್ಲೂಕಿನ ಎನ್.ಆರ್.ಎಲ್.ಎಮ್. ಸಂಜೀವಿನಿ ತಾಲ್ಲೂಕು ಮಟ್ಟದ ಒಕ್ಕೂಟ, ಹಾಗೂ ಕಳಲೆಯ ಕದಲಿವನ ಧನ ವಿಕಾಸ ಕೇಂದ್ರ, ಇವರುಗಳ ಸಹಯೋಗದೊಂದಿಗೆ ರೈತ ಮಹಿಳೆಯರಿಗೆ ಮೇ 25 ಮತ್ತು 26 ರಂದು ಎರಡು ದಿನಗಳ ಬಾಳೆ ಬೆಳೆಯ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಹಾಗೂ ಉದ್ಯಮಶೀಲತೆ ಅವಕಾಶಗಳ ಕುರಿತು ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಬಾಳೆ ಬೆಳೆಯ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಸದುಪಯೋಗ ಪಡೆದುಕೊಂಡು ಉದ್ಯಮಶೀಲತೆಯಿಂದ ರೈತ ಮಹಿಳೆಯರು ತಮ್ಮ ಆದಾಯವನ್ನು ದ್ವಿಗುಣ ಮಾಡಿಕೊಳ್ಳಬಹುದೆಂದು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಮೈಸೂರು ಜಿಲ್ಲಾ ಪಂಚಾಯತ್ ಲಾಲಿ ಯೋಜನಾ ನಿರ್ದೇಶಕರಾದ ಶ್ರೀ ಕೆ. ಭೀಮಪ್ಪರವರು ಕಾರ್ಯಕ್ರಮವನ್ನು ಕುರಿತು ಮಾತನಾಡಿ, ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಬಾಳೆ ಬೆಳೆಯ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ತರಬೇತಿಗಳನ್ನು ಆಯೋಜಿಲಾಗುತ್ತಿದ್ದು ರೈತ ಮಹಿಳೆಯರು ಮತ್ತು ಸ್ವಸಹಾಯ ಸಂಘದ ಸದಸ್ಯರು ತರಬೇತಿಯನ್ನು ಪಡೇದುಕೊಂಡು ತಮ್ಮ ಉದ್ಯಮಗಳನ್ನು ಉನ್ನತ ಮಟ್ಟಕ್ಕೆ

ಬೆಳೆಸಿಕೊಳ್ಳಬೇಕೆಂದು ತಿಳಿಸಿದರು. ಇನ್ನೋರ್ವ ಮುಖ್ಯ ಅತಿಥಿಗಳಾದ ಮೈಸೂರು ತಾಲ್ಲೂಕು ಪಂಚಾಯತ್ ಸಂಜೀವಿನಿ ಯೋಜನೆಯ ವ್ಯವಸ್ಥಾಪಕರಾದ ಶ್ರೀಮತಿ ದಿವ್ಯಾರವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ ಮಹಿಳೆಯರು ಉದ್ಯಮಶೀಲತೆಯಿಂದ ಸ್ವಾವಲಂಬಿಯಾಗಬೇಕೆಂದರು.

ಕೆವಿಕೆಯ ಗೃಹ ವಿಜ್ಞಾನಿ ಡಾ. ದೀಪಕರವರು ಬಾಳೆ ಬೆಳೆಯ ಸಂಸ್ಕರಣೆ ಮತ್ತು ಅದರ ಆಧುನಿಕ ಉತ್ಪನ್ನಗಳ ಬಗ್ಗೆ ತಿಳಿಸಿದರು.

## ಗೆದ್ದವರ ಬದುಕಿನ ಸ್ಫೂರ್ತಿಯೊಂದಿಗೆ ಸೋತವರ ಬದುಕಿನ ಅಧ್ಯಯನವಾಗಬೇಕು



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸ್ನಾತಕೋತ್ತರ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಕಾರ್ಯಕ್ರಮವನ್ನು ಡಾ. ನಾ. ಸೋಮೇಶ್ವರರವರು ಉದ್ಘಾಟಿಸಿ ಮಾತನಾಡಿದರು. (23 ಮೇ 2026)

ವಿದ್ಯಾರ್ಥಿಗಳು ಶಿಸ್ತು, ಸಂಯಮ, ಸಮಯಪಾಲನೆ, ಏಕಾಗ್ರತೆಯ ಮನೋಭಾವಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕು. ಸಾಧಕರ ಚರಿತ್ರೆಗಳನ್ನು ಅಧ್ಯಯನ ಮಾಡುತ್ತಿರಬೇಕು. ಚರಿತ್ರೆಯಲ್ಲಿ ಗೆದ್ದವರ ಕಥೆಯಷ್ಟೆ ಇರುವುದಿಲ್ಲ. ಸೋತವರ ಕಥೆಯೂ ಇದೆ. ಅದರಿಂದಲೂ ಕಲಿಯುವುದು ಸಾಕಷ್ಟಿದೆ. ಗೆದ್ದವರ ಬದುಕಿನ ಸ್ಫೂರ್ತಿಯೊಂದಿಗೆ ಸೋತವರ ಬದುಕಿನ ಅಧ್ಯಯನವೂ ಆಗುತ್ತಿರಬೇಕು. ಸೋಲಿಗೆ ಹೆದರಬಾರದು, ಮತ್ತೆಮತ್ತೆ ಪ್ರಯತ್ನಿಸಬೇಕು. ಗೆದ್ದವರು ಬೀಗಬಾರದು. ತಮ್ಮ ಮುಂದಿನ ಮಹತ್ವದ ಜವಾಬ್ದಾರಿಗಳನ್ನು, ಸವಾಲುಗಳನ್ನು ಎಚ್ಚರಿಕೆಯಿಂದ ಅರಿಯುತ್ತಿರಬೇಕು. ವಿದ್ಯಾರ್ಥಿಗಳು ಅರ್ಜುನನಂತೆ ಸವ್ಯಸಾಚಿ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು 'ಚಂದನ' ದೂರದರ್ಶನ ವಾಹಿನಿಯ 'ಥಟ್ ಅಂತ ಹೇಳಿ' ಕಾರ್ಯಕ್ರಮದ ನಿರೂಪಕರಾದ ಡಾ. ನಾ. ಸೋಮೇಶ್ವರರವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ದಿನಾಂಕ 23.5.2026 ರಂದು ನಡೆದ ಸ್ನಾತಕೋತ್ತರ ವಿಭಾಗದ

ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಸಮಾರೋಪ ನುಡಿಗಳನ್ನಾಡಿದರು. ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸದಾ ಸಹಕಾರಿ. ಎಲ್ಲಾ ಶಿಕ್ಷಣ ಸಂಸ್ಥೆಗಳು ಇದನ್ನು ಪಠ್ಯಪೂರಕ ಚಟುವಟಿಕೆ ಎಂದು ಭಾವಿಸಬೇಕು. ಮಾನವನ ಮೆದುಳು ರಚನೆಯಲ್ಲಿ ಎಡ ಮತ್ತು ಬಲ ಅರೆಗೋಳಗಳು ವಿಭಿನ್ನವಾಗಿ ಕಾರ್ಯನಿರ್ವಹಿಸುತ್ತವೆ. ಎಡ ಅರೆಗೋಳದ ಮೆದುಳು ತಾರ್ಕಿಕವಾಗಿ ಯೋಚಿಸಿದರೆ, ಬಲ ಅರೆಗೋಳದ ಮೆದುಳು ಭಾವನಾತ್ಮಕವಾಗಿ ಯೋಚಿಸುತ್ತದೆ. ಆ ಕಾರಣಕ್ಕೆ ಇವುಗಳ ಬೆಳವಣಿಗೆಯಂತೆ ಮನುಷ್ಯರ ವರ್ತನೆಗಳು ಇರುತ್ತವೆ. ಈ ಮೆದುಳುಗಳ ಬೆಳವಣಿಗೆಯಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಪಾತ್ರ ಮಹತ್ವದ್ದಾಗಿದೆ. ಸರಿಯಾದ ಅಧ್ಯಯನ ಕ್ರಮಗಳನ್ನು ಅನುಸರಿಸಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಪಡೆಯಬಹುದು. ಸಮಸ್ಯೆ ಬಂದಾಗ ಹೆದರಬೇಡಿ, ತಾಳ್ಮೆಯಿಂದ ಯೋಚಿಸಿ. ನಿಮ್ಮ ಮುಂದಿನ ಔದ್ಯೋಗಿಕ ಬದುಕಿನಲ್ಲಿಯೂ ಶಿಸ್ತನ್ನು ಬಿಡಬೇಡಿ. ಭಾರತೀಯ ಸೇನೆಯಲ್ಲಿ ಉದ್ಯೋಗಾವಕಾಶಗಳಿವೆ. ಅವುಗಳನ್ನು ಸಮರ್ಥವಾಗಿ ಬಳಸಿಕೊಳ್ಳಿ. ಪ್ರತಿದಿನ ಕೌಶಲ್ಯಗಳನ್ನು ವೃದ್ಧಿಸಿಕೊಳ್ಳಿ, ನೈತಿಕತೆ ಬಲಗೊಳಿಸಿಕೊಳ್ಳಿ. ಬದುಕಿನಲ್ಲಿ ಸಮತೋಲನ ಸಾಧಿಸುವುದನ್ನು ಅಭ್ಯಾಸಮಾಡಿಕೊಳ್ಳಿ. ನಿಮ್ಮ ಭಾವನೆಗಳನ್ನು ವ್ಯಕ್ತಪಡಿಸುವಾಗ ಸದಾ ಪ್ರಜ್ಞಾವಂತರಾಗಿ ವ್ಯಕ್ತಪಡಿಸಿ ಎಂದರು.

ಮೈಸೂರಿನ ಅಂತಾರಾಷ್ಟ್ರೀಯ ಖ್ಯಾತಿಯ ಯೋಗಪಟು ಕು. ಎಚ್. ಖುಷಿ ಅವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಯೋಗಾಭ್ಯಾಸದಿಂದ ವಿಭಿನ್ನವಾದ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ನಮ್ಮ ದೇಹ ಮತ್ತು ಮನಸ್ಸಿನ ಮೇಲಿನ ನಿಯಂತ್ರಣವನ್ನು ಸಾಧಿಸುತ್ತೇವೆ. ಇದರಿಂದ ಸಣ್ಣತನ, ದ್ವೇಷ, ಅಸೂಯೆ ಮುಂತಾದವುಗಳಿಂದ ದೂರವಿದ್ದು ವಿಶಾಲವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಹುದು. ಪ್ರತಿದಿನ ನಾವು ಮಾಡುವ ಕಾರ್ಯ ನಮಗೆ ತೃಪ್ತಭಾವವನ್ನು ಮೂಡಿಸಬೇಕು. ಗೆಲುವು, ಸಾಧನೆಯ ಜೊತೆಯಲ್ಲಿ ಸರಳತೆಯ ಗುಣವನ್ನು ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಪ್ರತಿಭೆ, ಜ್ಞಾನ, ಚತುರತೆ, ಕೌಶಲ್ಯ ಗುಣಗಳನ್ನು ಬೆಳಸಿಕೊಳ್ಳಿ. ಅನಿವಾರ್ಯ ಮತ್ತು ಅವಕಾಶಗಳ ಬಗ್ಗೆ ನಿಮಗೆ ಪ್ರಜ್ಞೆ ಇರಲಿ. ಬದುಕಿನಲ್ಲಿ ಯಾವುದೂ ಅನಿವಾರ್ಯವಲ್ಲ. ಎಲ್ಲವನ್ನು ಅವಕಾಶವಾಗಿ ನೋಡಿ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡುತ್ತಾ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಕಾಲೇಜು ಸದಾ ಪ್ರೋತ್ಸಾಹವನ್ನು ಕೊಡುತ್ತಿದೆ. ವಿದ್ಯಾರ್ಥಿಗಳ ಪ್ರತಿಭೆ, ಸೃಜನಶೀಲತೆ ಮತ್ತು ಕ್ರೀಡಾ ಸ್ಫೂರ್ತಿಯನ್ನು ಗುರುತಿಸುವುದಕ್ಕೆ ಈ ವೇದಿಕೆ ಅವಕಾಶ ಕೊಟ್ಟಿದೆ. ಇದನ್ನು ವಿದ್ಯಾರ್ಥಿಗಳು ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಿಂದ ಸಂಘಟನಾ ಚತುರತೆ, ನಾಯಕತ್ವದ ಗುಣ, ಧೈರ್ಯ, ಆತ್ಮವಿಶ್ವಾಸ, ವಿಭಿನ್ನವಾಗಿ ಆಲೋಚಿಸುವ ಮನಃಸ್ಥಿತಿ ಬರುತ್ತದೆ. ಇದು ಕೃತಕಬುದ್ಧಿಮತೆಯ ಕಾಲ. ಕೃತಕ ಬುದ್ಧಿಮತ್ತೆಯಿಂದ ಉದ್ಯೋಗಾವಕಾಶಗಳು ನಾಶವಾಗುತ್ತಿವೆ ಎಂಬ ಚರ್ಚೆ ಕೇಳಿಬರುತ್ತಿದೆ. ಆದರೆ ಈ ತಂತ್ರಜ್ಞಾನದಿಂದ ಉದ್ಯೋಗಗಳು ನಾಶವಾಗುತ್ತಿಲ್ಲ. ಉದ್ಯೋಗದ

ಸ್ವರೂಪಗಳು ಬದಲಾಗುತ್ತಿವೆ. ಇದನ್ನು ವಿದ್ಯಾರ್ಥಿಗಳು ಸರಿಯಾಗಿ ಅರಿತುಕೊಂಡರೆ ಹೊಸ ಹೊಸ ಅವಕಾಶಗಳು ದೊರೆಯುತ್ತವೆ. ವಿದ್ಯಾರ್ಥಿಗಳು ಈ ತಂತ್ರಜ್ಞಾನದ ಸಹಾಯದಿಂದ ಹೊಸ ಹೊಸ ಕೌಶಲ್ಯಗಳೊಂದಿಗೆ ಅಭಿಮುಖರಾಗಬೇಕು. ಕೃತಕ ಬುದ್ಧಿಮತ್ತೆಯನ್ನು ಶತ್ರುವಾಗಿ ಕಾಣದೆ, ಅದನ್ನು ಸಹಾಯಕ ಸಾಧನವಾಗಿ ಬಳಸಿಕೊಳ್ಳುವ ಅವಶ್ಯಕತೆ ಇದೆ ಎಂದರು.

ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಡಾ. ಎಂ.ಪಿ. ಸೋಮಶೇಖರ್ ಮತ್ತು ದೈಹಿಕ ನಿರ್ದೇಶಕರಾದ ಶ್ರೀ ಎಂ. ಕಾರ್ತಿಕ್ ಉಪಸ್ಥಿತರಿದ್ದರು. ವಿದ್ಯಾರ್ಥಿ ಆರ್. ಶ್ರೀ ಕಿರಣ್ ನಿರೂಪಿಸಿದರು. ಕು. ಎಚ್.ಕೆ. ಲಾವಣ್ಯ ಸ್ವಾಗತಿಸಿದರು. ಕು. ಅಂಕಿತಾ ಕುಲಕರ್ಣಿ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಎನ್. ಧನುಷ್ ವಂದಿಸಿದರು. ಶ್ರೀ ಆಕಾಶ್ ಮತ್ತು ಕು. ಎಂ. ಜೆ. ಜಾಹ್ನವಿ ಅವರು ಸಾಂಸ್ಕೃತಿಕ ಮತ್ತು ಕ್ರೀಡಾ ವರದಿಗಳನ್ನು ಮಂಡಿಸಿದರು. ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ವಿಜೇತರಾದವರಿಗೆ ಪ್ರಮಾಣ ಪತ್ರ ಮತ್ತು ಬಹುಮಾನಗಳನ್ನು ನೀಡಲಾಯಿತು.

## ಸ್ಕಿಜೋಫ್ರೇನಿಯಾ ಕಾಯಿಲೆಯನ್ನು ಗುಣಪಡಿಸಬಹುದು




ಸಾಮಾಜಿಕ ಬೆಂಬಲ ಮತ್ತು ಸೂಕ್ತ ವೈದ್ಯಕೀಯ ಚಿಕಿತ್ಸೆಯಿಂದ ಸ್ಕಿಜೋಫ್ರೇನಿಯಾ ಕಾಯಿಲೆಯನ್ನು ಗುಣಪಡಿಸಬಹುದು ಎಂದು ಮೈಸೂರಿನ ಆಲದಮರ ಪ್ರತಿಷ್ಠಾನ ಸಂಸ್ಥೆಯ ಕಾರ್ಯಕ್ರಮದ ಪ್ರಮುಖರು ಮತ್ತು ಮನೋವೈದ್ಯರಾದ ಡಾ. ಪಿ. ವಿನಯ್ ಕುಮಾರ್‌ರವರು ಹೇಳಿದರು.

**ಜೆಎಸ್‌ಎಸ್ ಆಸ್ಪತ್ರೆ ಮತ್ತು ಮನೋವೈದ್ಯಕೀಯಶಾಸ್ತ್ರ ವಿಭಾಗದ** ವತಿಯಿಂದ ದಿನಾಂಕ 15.5.2026 ರಂದು ಆಯೋಜಿಸಿದ್ದ ವಿಶ್ವ ಸ್ಕಿಜೋಫ್ರೇನಿಯಾ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ಕಿಜೋಫ್ರೇನಿಯಾ ಒಂದು ಮಾನಸಿಕ ಕಾಯಿಲೆಯಾಗಿದೆ. ಇದಕ್ಕೆ ಒಳಗಾದವರು ತಮ್ಮದೆ ಆದ ಭ್ರಮೆ ಮತ್ತು ಭಯದಲ್ಲಿ ಮನಸ್ಸಿನ ಸಮತೋಲನ ಕಳೆದುಕೊಳ್ಳುತ್ತಾರೆ. ಮನೆ ಮತ್ತು ಸಮಾಜವನ್ನು ತೊರೆದು ನಿರಾಶ್ರಿತರಾಗಿ ಬದುಕುತ್ತಾರೆ. ಇಂತವರನ್ನು ನಮ್ಮ ಆಲದ ಮರ ಸಂಸ್ಥೆಯು ಗುರುತಿಸಿ ಅವರಿಗೆ ಮನೋವೈದ್ಯಕೀಯ ಆರೈಕೆ ಮತ್ತು ಪುನರ್ವಸತಿ ಬೆಂಬಲವನ್ನು ಒದಗಿಸಿ ಸ್ವತಂತ್ರ ಜೀವನ ನಡೆಸಲು ಸಹಕರಿಸುತ್ತಿದೆ ಎಂದು ತಿಳಿಸಿದರು.

